ಗಣ್ಯರು ಕಂಡಂತೆ ಗಾಂಧೀಜಿ

ಸಂಗ್ರಹ

ಪ್ರೊ. ಜಿ.ಬಿ. ಶಿವರಾಜು



ಗಣ್ಯರು ಕಂಡಂತೆ ಗಾಂಧೀಜಿ

ಸಂಗ್ರಹ
ಪ್ರೊ. ಜಿ.ಬಿ. ಶಿವರಾಜು
ಮೊ : 9449609127

ಪ್ರಕಾಶಕರು :
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001.
ದೂ : 080-22261967
e-mail : gandhibhavanbangalore@gmail.com

ಗಣ್ಯರು ಕಂಡಂತೆ ಗಾಂಧೀಜಿ – ಸಂಗ್ರಹ : ಪ್ರೊ. ಜಿ.ಬಿ. ಶಿವರಾಜು
ಪ್ರಕಾಶಕರು : ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 08022261967

ಮೊದಲನೆ ಮುದ್ರಣ : 2018
ಪ್ರತಿಗಳು : 1000
ಎರಡನೆ ಪರಿಷ್ಕೃತ ಮುದ್ರಣ : 2018
ಪ್ರತಿಗಳು : 5000
ಮೂರನೇ ಪರಿಷ್ಕೃತ ಮುದ್ರಣ : 2019
ಪ್ರತಿಗಳು : 3000
ಬೆಲೆ : 20/– ರೂ.

ಮುದ್ರಕರು :
ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್
ಬೆಂಗಳೂರು – 560 044.
ದೂರವಾಣಿ : 080–23357963

ಅಧ್ಯಕ್ಷರ ನುಡಿ

ಆಧುನಿಕ ಧ್ವಂಸೀಕರಣ ಯುಗದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ತತ್ವಗಳು ಕತ್ತಲಿನ ಸಮಾಜಕ್ಕೆ ದೀವಟಿಗೆ. ಅವರ ಸತ್ಯ, ಅಹಿಂಸೆ, ಸ್ವದೇಶಿ ತತ್ವಗಳು ಬದುಕಿನ ದಾರಿ ಹಸನುಗೊಳಿಸಲು ನೇಗಿಲಿದ್ದಂತೆ. "ನನ್ನ ಜೀವನವೇ ನನ್ನ ಸಂದೇಶ" ಎಂದು ನುಡಿದಂತೆ ನಡೆದು ವಿಶ್ವಕ್ಕೆ ಆದರ್ಶಪ್ರಾಯರಾದ ಗಾಂಧೀಜಿ ಅವರ ವ್ಯಕ್ತಿ ವಿಚಾರಗಳು ಹಿಂದೆಂದಿಗಿಂತಲೂ ಇಂದು ಅತ್ಯವಶ್ಯಕ ಅಷ್ಟೇ ಅಲ್ಲ ಅವುಗಳು ಮನುಕುಲ ಇರುವವರೆಗೂ ಪ್ರಸ್ತುತ. ಅವರ ವ್ಯಕ್ತಿತ್ವದ ಹಿರಿಮೆ ಗರಿಮೆಗಳನ್ನು ತಿಳಿಸಿ ತನ್ಮೂಲಕ ಹತಾಶೆ ಮತ್ತು ದ್ವಂದ್ವದಲ್ಲಿರುವ ಯುವ ಮನಸ್ಸುಗಳಿಗೆ ಆತ್ಮವಿಶ್ವಾಸ ಮತ್ತು ಧೈರ್ಯದ ಭರವಸೆಯನ್ನು ನೀಡುವ ನಿರೀಕ್ಷೆಯಿಂದ ವಿಶ್ವದ ಗಣ್ಯರು ಗಾಂಧೀಜಿ ಅವರನ್ನು ಕಂಡು ಹೇಳಿದ ಮಾತುಗಳನ್ನು ಕ್ರೋಡೀಕರಿಸಿ, ದಾಖಲಿಸಿ ಸಾರ್ವಜನಿಕರಿಗೆ ತಲುಪಲಿ ಎಂಬ ಆಶಯದ ಒಂದು ಸಣ್ಣ ಪ್ರಯತ್ನವೇ "ಗಣ್ಯರು ಕಂಡಂತೆ ಗಾಂಧಿ" ಎಂಬ ಸಂಗ್ರಹಿತ ಈ ಕಿರು ಹೊತ್ತಿಗೆ.

ಗಾಂಧೀಜಿಯವರ ಬಗ್ಗೆ ವಿಶ್ವದಲ್ಲಿ ವಿಪುಲವಾದ ಸಾಹಿತ್ಯ ಲಭ್ಯವಿದೆ. ಕರ್ನಾಟಕ ಗಾಂಧೀ ಸ್ಮಾರಕ ನಿಧಿಯು ತನ್ನ ಏಳು ದಶಕಗಳ ಸುದೀರ್ಘ ಪಯಣದಲ್ಲಿ ನೂರಾರು ಅಮೂಲ್ಯ ಗ್ರಂಥಗಳನ್ನು ಪ್ರಕಟಿಸಿದೆ. ಗಾಂಧೀಜಿ ಅವರ ಮಾರ್ಗದಲ್ಲಿ ಬದುಕಿದ ನಮ್ಮ ಹಿರಿಯರು ಗಾಂಧೀ ಭವನದಲ್ಲಿ ಮಾಡಿದ ಸಾರ್ಥಕ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಹಲವು ದಶಕಗಳ ತನ್ನ ಬೋಧನಾ ವೃತ್ತಿಯ ಜೊತೆಗೆ ಯುವಜನರ ಬದುಕು ಕಟ್ಟುವಲ್ಲಿ ಸಮರ್ಥರಾದ ಮಾರ್ಗದರ್ಶನ ನೀಡುತ್ತಾ ಬಂದಿರುವ ಪ್ರೊ॥ ಜಿ.ಬಿ. ಶಿವರಾಜು ಅವರ "ಗಣ್ಯರ ಕಂಡಂತೆ ಗಾಂಧೀಜಿ" ಎಂಬ ಸಂಗ್ರಹಿತ ಈ ಕಿರುಹೊತ್ತಿಗೆಯು ಗಾಂಧೀಜಿ ಸಾಹಿತ್ಯ ಕಣಜಕ್ಕೆ ಒಂದು ಮೌಲ್ಯಯುತ ಸೇರ್ಪಡೆಯಾಗಿದೆ. ಕಸ್ತೂರಬಾ ಮತ್ತು ಬಾಪು ಅವರ 150ನೇ ಜನ್ಮ ವರ್ಷಾಚರಣೆಯ ಪ್ರಾರಂಭದ ಮುನ್ನವೇ ಇದನ್ನು ಪ್ರಕಟಿಸಲು ಗಾಂಧೀಭವನಕ್ಕೆ ಹೆಮ್ಮೆ ಎನಿಸುತ್ತದೆ. ಈ ಪುಟ್ಟ ಪುಸ್ತಕ ಹೆಚ್ಚು ಜನರಿಗೆ ವಿಶೇಷವಾಗಿ ಯುವಜನರಿಗೆ ತಲುಪಲಿ ಎಂಬುದು ನಮ್ಮ ಆಶಯ.

ಈ ಕಿರು ಹೊತ್ತಿಗೆಯ ಎಲ್ಲ ಪ್ರತಿಗಳೂ ಕೇವಲ ಎರಡು ತಿಂಗಳಲ್ಲಿ ಮುಗಿದು ಎರಡನೆಯ ಮುದ್ರಣಕ್ಕೆ ಅವಕಾಶ ಮಾಡಿಕೊಟ್ಟ ಓದುಗರ ಆಸಕ್ತಿಗೆ ಧನ್ಯವಾದಗಳು. ಗಾಂಧಿ ವ್ಯಕ್ತಿ ವಿಚಾರಗಳಲ್ಲಿ ಸಾರ್ವಜನಿಕರಿಗಿರುವ ಆಸಕ್ತಿ ದಿನೆ ದಿನೇ ಹೆಚ್ಚುತ್ತಿರುವುದು ಗಾಂಧೀಜಿ ಎಂದೆಂದೂ ಪ್ರಸ್ತುತ ಎಂಬುದನ್ನು ಸಾರುತ್ತದೆ. ಓದುಗರ ಆಸಕ್ತಿಗಾಗಿ ನನ್ನ ಕೃತಜ್ಞತೆಗಳು.

ಡಾ॥ ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕ.ಗಾಂ.ಸ್ಮಾ.ನಿ

ದಿನಾಂಕ : 30-01-2019
ಸರ್ವೋದಯ ದಿನ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು 150ನೇ ವರ್ಷಾಚರಣೆಯ ಅಪೂರ್ವಕಾಲ ಘಟ್ಟದಲ್ಲಿ 'ಗಣ್ಯರು ಕಂಡಂತೆ ಗಾಂಧೀ' ಕೃತಿಯನ್ನು ಪ್ರಕಟಿಸಲು ಸಂತೋಷವಾಗುತ್ತಿದೆ. ಪ್ರೊ ಜಿ.ಬಿ. ಶಿವರಾಜು ಅವರು ಸಂಗ್ರಹಿಸಿ, ಕನ್ನಡಾನುವಾದಗೊಳಿಸಿದ ಈ ಕೃತಿಯು ಗಾಂಧೀಜಿ ಅವರನ್ನು ಅಂತರರಾಷ್ಟ್ರೀಯವಾಗಿ ಪರಿಭಾವಿಸಿದ ಬಗೆ, ರಾಷ್ಟ್ರೀಯ ಚಿಂತಕರು ಗ್ರಹಿಸಿದ ಪರಿ, ತಜ್ಞರು-ವಿದ್ವಾಂಸರು ಅರ್ಥೈಸಿಕೊಂಡ ರೀತಿಯನ್ನು ಅನಾವರಣಗೊಳಿಸುತ್ತದೆ. ಅಪಾರ ಜೀವನಾನುಭವ ಮತ್ತು ಸಾರ್ವಜನಿಕ ಬದುಕಿನಾನುಭವವನ್ನು ಕಂಡುಂಡ ಪ್ರೊ ಜಿ.ಬಿ. ಶಿವರಾಜು ಅವರು ಮಾತ್ರ ಗಾಂಧೀಜಿ ಅಂಥವರನ್ನು ಸಮಷ್ಠಿ ದೃಷ್ಠಿಕೋನದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿರುವುದನ್ನು ಇಲ್ಲಿ ಗ್ರಹಿಸಬಹುದು. ಗಾಂಧೀಜಿ ಅವರು ಇಂದಿಗೂ, ಎಂದಿಗೂ ಈ ಜಗತ್ತಿಗೆ ದಾರಿ ದೀಪವಾಗಿದ್ದಾರೆ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ವರ್ತಮಾನದಲ್ಲಿ ಗಾಂಧೀಜಿ ಅವರು ಎಷ್ಟು ಪ್ರಸ್ತುತ, ಎಷ್ಟು ಅನಿವಾರ್ಯ, ಎಷ್ಟೂ ಚರ್ಚೆಗೆ ಒಳಪಟ್ಟಿದ್ದಾರೆ ಎಂಬುದು ನಮ್ಮೆಲ್ಲರಿಗೂ ತಿಳಿದ ವಿಷಯ. ಗಾಂಧೀಜಿ ಅವರ ಸತ್ಯ, ಅಹಿಂಸೆ, ನ್ಯಾಯ ವಿವೇಚನೆ, ಸರ್ವೋದಯ, ಸಮಾನತೆ ತತ್ವಗಳು ವಿಶ್ವಕ್ಕೇ ಸರ್ವಕಾಲಿಕವಾದ ಆದರ್ಶಗಳಾಗಿವೆ. ದೇಶ, ಜನಸಮುದಾಯ ಮತ್ತು ಸಮಾಜ ಸರ್ವಕಾಲಿಕ ಆದರ್ಶಗಳಿಲ್ಲದ್ದಿದ್ದರೆ ಕ್ರೌರ್ಯ, ಹಿಂಸೆ, ಅಮಾನುಷತೆಯ ಮಹಾ ಕೂಪವಾಗುವುದೆಂಬ ವಿಚಾರಗಳನ್ನು ಸರ್ವರಿಗೂ ದೊಡ್ಡಣ್ಣನಂತೆ ಈ ಕೃತಿ ತಿಳಿಸಿಕೊಡುತ್ತಾ ಸಾಗಿದೆ. ಇಮ್ಥಹ ಅಪರೂಪ ಕೃತಿಯನ್ನು ಬರೆದು ಗಾಂಧೀಭವನದಿಂದ ಲೋಕರ್ಪಣೆಗೊಳಿಸಲು ಕೊಟ್ಟಂತಹ, ಪ್ರೊ ಜಿ.ಬಿ ಶಿವರಾಜು ಉಪಾಧ್ಯಕ್ಷರು ಗಾಂಧೀಭವನ ಇವರಿಗೆ ಅಭಿನಂದನೆಗಳು ಸಲ್ಲುತ್ತವೆ.

ಇಂಥಹ ಅನನ್ಯ ಕೃತಿಯನ್ನು ಪ್ರಕಟಿಸಲು ಡಾ. ವೂಡೇ ಪಿ. ಕೃಷ್ಣ ಅಧ್ಯಕ್ಷರು, ಗಾಂಧೀಭವನ ಇವರು ಸದಾ ಉತ್ಸುಕರಾಗಿರುವುದಕ್ಕಾಗಿ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇಂಥಹ ಕೃತಿ ಪ್ರಕಟಿಸಲು ಸದಾ ಸಹಕಾರ ನೀಡುತ್ತಿರುವ, ಗಾಂಧೀಭವನದ ಉಪಾಧ್ಯಕ್ಷರಾದ ಶ್ರೀ ವಿ.ಎನ್. ತಿಪ್ಪನಗೌಡ ಅವರಿಗೆ ಮತ್ತು ಎಲ್ಲಾ ಸದಸ್ಯರಿಗೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯನ್ನು ಅಂದವಾಗಿ ಮುದ್ರಿಸಿದ ರಿಪ್ಲಿಕಾ ಆಫ್‌ಸೆಟ್ ಪ್ರಿಂಟರ್ಸ್‌ನ ಬಳಗದವರಿಗೆ ನಮಸ್ಕಾರಗಳು.

ಇಂದಿರಾ
ಗೌ. ಕಾರ್ಯದರ್ಶಿ
ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು

ನಿವ್ಮೊಡನೆ

"ಭಾರತದಲ್ಲಿ ಕವಿಗಳು, ವಿಚಾರವಂತರು ಮತ್ತು ಜನಾದರಣೆಯ ನೇತಾರರಿಗೆ ಸರಿಸಮಾನರಾದ ಅಥವಾ ಹೋಲಿಸಬಹುದಾದಂತಹ ವರನ್ನು ಯುರೋಪಿನಲ್ಲಾಗಲಿ ಅಥವಾ ಅಮೆರಿಕಾದಲ್ಲಾಗಲಿ ನಾನಿನ್ನು ನೋಡಿಯೇ ಇಲ್ಲ"

"ಗಾಂಧೀಜಿ ಮತ್ತೊಬ್ಬ ಏಸು"

– **ರೊಮಾರೋಲಾ** (ನೊಬೆಲ್ ಪ್ರಶಸ್ತಿ ಪುರಸ್ಕೃತರು)

"ಗಾಂಧೀಜಿ ಅವರಂತಹ ಮಹಾನ್ ವ್ಯಕ್ತಿಯನ್ನು ಪಡೆದ ಭಾರತೀಯರು ಪುಣ್ಯವಂತರು"

– **ಜಿ. ಸಿ. ಸ್ಮಟ್ಸ್** (ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಅವರನ್ನು ಜೈಲಿನಲ್ಲಿಟ್ಟಿದ್ದ ಬ್ರಿಟಿಷ್ ಅಧಿಕಾರಿ)

"ಗಾಂಧೀಜಿ ಜಗತ್ತಿಗೆ ಅನಿವಾರ್ಯ, ಮರೆತರೆ ವಿಶ್ವದ ನಾಶ"

– **ಮಾರ್ಟಿನ್ ಲೂಥರ್ ಕಿಂಗ್** (ಅಮೇರಿಕಾದ ಆಫ್ರೋ ಅಮೆರಿಕನ್ ಜನರ ನಾಯಕ)

"ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು"

– **ಪಂಡಿತ್ ಜವಹರಲಾಲ್ ನೆಹರು** (ಭಾರತದ ಪ್ರಥಮ ಪ್ರಧಾನಿ)

ವಿಶ್ವದ ಗಣ್ಯರು ಹೇಳಿದ ಮೇಲಿನ ಮಾತುಗಳು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ವ್ಯಕ್ತಿತ್ವದ ಹಿರಿಮೆ ಗರಿಮೆಯನ್ನು ಸಾರುತ್ತವೆ. ಇಂದಿನ ಯುವ ಪೀಳಿಗೆಯು ಆಧುನಿಕ ಯುಗದಲ್ಲಿ ದ್ವಂದ್ವದಲ್ಲಿದ್ದಾರೆ, ಹತಾಶರಾಗಿದ್ದಾರೆ. ಅಸಹಿಷ್ಣುತೆಯ ಕಾರ್ಮೋಡ ವರನ್ನು ಸುತ್ತುವರಿದಿದೆ. ನಾವು ವಾಸ್ತವವಾಗಿ ಜೀವನದ ಉದ್ದೇಶ

ಯುವಜನರಲ್ಲಿ ಅರಿವು ಮೂಡಿಸುವುದರಲ್ಲಿ ಬಹುಪಾಲು ವಿಫಲರಾಗಿದ್ದೇವೆ ಅನಿಸುತ್ತಿದೆ. ಸಮಾಜದ ಪ್ರತಿಯೊಬ್ಬರಲ್ಲಿಯೂ ಒಬ್ಬ ಬುದ್ಧ, ಬಸವೇಶ್ವರ, ವಿವೇಕಾನಂದ, ಗಾಂಧಿ, ಡಾ॥ ಅಂಬೇಡ್ಕರ್ ಮೊದಲಾದ ದಾರ್ಶನಿಕರು ಇದ್ದೇ ಇರುತ್ತಾರೆ. ಆದರೆ ಅವುಗಳನ್ನು ಕಡೆಗಣಿಸಿ, ತಿರಸ್ಕರಿಸಿ ಆಧುನಿಕ ಆಕರ್ಷಣೆಗೆ ಯುವಕರು ಬಲಿಯಾಗುತ್ತಿರುವುದು ವಿಪರ್ಯಾಸದ ಸಂಗತಿ. ಯುವ ಜನತೆ ಈ ಮಹಾಮಹಿಮರನ್ನು ಹೆಚ್ಚೆಚ್ಚು ಓದಿಕೊಳ್ಳಬೇಕು. ಆಗ ಮಾತ್ರ ಜೀವನಕ್ಕೆ ಬಹು ಅಮೂಲ್ಯವಾದ ಪಾಠಗಳು ಸಿಗುತ್ತವೆ.

ಯುವಜನತೆ ಹತಾಶೆಯಿಂದ ಹೊರಬರಲು, ಮೌಲ್ಯಯುತ ಜೀವನಕ್ಕೆ ಹಾಗೂ ಅವರ ಜೀವನದಲ್ಲಿ ಸಕಾರಾತ್ಮಕ ಭಾವನೆ ಮೂಡುವುದಕ್ಕೆ ಗಾಂಧೀಜಿ ವಿಚಾರ ನಮಗೆಲ್ಲ ಪರಿಹಾರ. ಗಾಂಧೀಜಿ ಜಗತ್ತಿನ ಒಂದು ಮಹೋನ್ನತ ಆದರ್ಶದ ಸಂಕೇತವಾಗಿದ್ದಾರೆ. ಯಂತ್ರಯುಗದ ಭರಾಟೆಯಲ್ಲಿ ನಾವು ನೆಮ್ಮದಿ ಮತ್ತು ಶಾಂತಿಯಿಂದಿರಲು ಗಾಂಧೀಜಿ ಅವರ ಬದುಕು ಮತ್ತು ಚಿಂತನೆಗಳು ಹಿಂದೆಂದಿಗಿಂತಲೂ ಇಂದು ಅತ್ಯಂತ ಪ್ರಸ್ತುತ ಹಾಗೂ ಅನಿವಾರ್ಯ. ಬಸವಳಿದು ಕ್ಷೀಣಿಸುತ್ತಿರುವ ಮಾನವನ ಮನಸ್ಸನ್ನು ಪುನಶ್ಚೇತನಗೊಳಿಸುವ ಮತ್ತು ಸನ್ಮಾರ್ಗದಲ್ಲಿ ಕೊಂಡೊಯ್ಯುವ ದಿಸೆಯಲ್ಲಿ ಅವರ ವ್ಯಕ್ತಿತ್ವ ಆಧುನಿಕ ಜಗತ್ತಿಗೆ ದಾರಿದೀಪ. ನಾಯಕತ್ವದ ಜೊತೆಗೆ ಪ್ರಾಮಾಣಿಕ ಬದುಕಿನ ಸುಖವನ್ನು ತೋರಿಸಿಕೊಟ್ಟು, ಸರಳ ಬದುಕನ್ನು ಜೀವನದ ಪಥವಾಗಿಸಿಕೊಂಡು, ಸಮಷ್ಟಿಯಲ್ಲಿ ತನ್ನ ಸಂತೋಷವನ್ನು ಕಂಡುಕೊಂಡು ಜೀವನದ ಸಾರ್ಥಕತೆಯನ್ನು ಮೆರೆದವರು, ಮಹಾತ್ಮ ಗಾಂಧಿ. ನಾಲಗೆಯನ್ನು ನಂಬಿ ನಡೆದ ನಾಯಕ. ಆಡಿದ ಮಾತಿಗೂ ಅಂತರವಿಲ್ಲದೆ ಬದುಕಿದ ನೇತಾರ ಎಂದು ಗಣ್ಯರು ಸ್ಮರಿಸಿದ್ದಾರೆ.

ಗಾಂಧೀಜಿ ಅವರನ್ನು"ಶತಮಾನದ ಶ್ರೇಷ್ಠೋತ್ತಮ ಮಾನವ", "ಅಂತರ್ ರಾಷ್ಟ್ರೀಯ ಭಾವೈಕ್ಯತೆಯ ಸಂಕೇತ" ಎಂದೂ ಸಹ ಬಣ್ಣಿಸಲಾಗಿದೆ. ಶತ್ರುವಿನಲ್ಲಿ ಮಿತ್ರನನ್ನು ಕಾಣುವ, ದ್ವೇಷ, ಅಸೂಯೆ ಇರುವಲ್ಲಿ ಪ್ರೀತಿ ಹುಟ್ಟಿಸುವ, ಹಿಂಸೆಯನ್ನು ಅಹಿಂಸೆಯಿಂದ ಗೆಲ್ಲುವ, ಬಲಹೀನನನ್ನು ಬಲಿಷ್ಠಗೊಳಿಸುವ ಮತ್ತು ಜಾತಿವಾದ, ಕೋಮು ವಾದದ ಸ್ಥಾನದಲ್ಲಿ ಭಾವೈಕ್ಯತೆ ತಂದವರು, ಸಂಸಾರಿಯಾಗಿಯೂ

ಸಂತತನದಿಂದ ಬದುಕಿದವರು, ನಿರ್ಮಲ ಮನಸ್ಸು ಮತ್ತು ದೇಹವನ್ನು ಹೊಂದಿ ಜೀವನವನ್ನು ಅತ್ಯಂತ ಕಠಿಣ ಪರೀಕ್ಷೆಗಳಿಗೆ ಒಡ್ಡಿಕೊಂಡು ಜೀವನವನ್ನೇ ಸಂದೇಶವನ್ನಾಗಿ ಬದುಕಿ ಈ ಮನುಕುಲ ಸದಾ ಸ್ಮರಿಸುವಂತಹ ಹೆಗ್ಗುರುತು ಬಿಟ್ಟಿರುವ ವಿಶ್ವದ ಬಹು ಎತ್ತರದ ದಾರ್ಶನಿಕ ಮಹಾತ್ಮ ಗಾಂಧೀಜಿ ಎಂದು ಗಣ್ಯರು ಬಣ್ಣಿಸಿದ್ದಾರೆ.

ಶ್ರೀ. ರಜನಿ ಭಕ್ಷಿ ಅವರ ಪುಸ್ತಕದಲ್ಲಿ ಶ್ರೀ ರವಿಕುಮಾರ್ ಅವರು ಗಾಂಧೀಜಿ ಅವರನ್ನು ಹೀಗೆ ಕಂಡಿದ್ದಾರೆ.

“ಗಾಂಧೀಜಿಯವರನ್ನು ಯಾವ ಕಾರಣಕ್ಕೆ ಪ್ರಸ್ತಾಪಿಸಲಾಗುತ್ತಿದೆ. ಎಂಬುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಆಧುನಿಕತೆ, ಸಂಪ್ರದಾಯ, ದೇಶಪ್ರೇಮ, ಶಿಕ್ಷಣ, ಆರೋಗ್ಯ, ಧರ್ಮ, ಸತ್ಯ, ಸತ್ಯಾಗ್ರಹ, ಸ್ವಾತಂತ್ರ್ಯ, ನ್ಯಾಯ, ಉಪವಾಸ, ಪ್ರತಿಭಟನೆ, ಸರಳತೆ, ಇಂದ್ರಿಯ ನಿಗ್ರಹ, ಸಸ್ಯಾಹಾರ, ಸೇವೆ, ಕೋಮು ಸೌಹಾರ್ದ, ಸಹಕಾರ, ಗುಡಿ ಕೈಗಾರಿಕೆ, ರಾಜಕೀಯ, ಪರಿಸರ, ಅಸ್ಪೃಶ್ಯತೆ ನಿವಾರಣೆ, ಮಹಿಳಾ ಸಬಲೀಕರಣ, ಮಾನವೀಯತೆ, ದೇವರು, ಕುಟುಂಬ ಯೋಜನೆ, ಸೌಹಾರ್ದ, ಮಕ್ಕಳ ಪೋಷಣೆ, ನಂಬಿಕೆ, ಪ್ರಾಮಾಣಿಕತೆ, ಮನೆ ನಿರ್ಮಾಣ ಹೀಗೆ ಬದುಕಿನ ಎಲ್ಲ ವಿವರಗಳ ಕುರಿತು ಒಂದಲ್ಲೊಂದು ಕಾರಣಕ್ಕೆ ಗಾಂಧೀಜಿ ಪ್ರಸ್ತಾಪಗೊಳ್ಳುತ್ತಲೇ ಹೋಗುತ್ತಾರೆ.”

ಇಪ್ಪತ್ತನೆಯ ಶತಮಾನದಲ್ಲಿ ತನ್ನ ವ್ಯಕ್ತಿತ್ವ ಮತ್ತು ಚಿಂತನೆಗಳಿಂದ ಜಗತ್ತನ್ನು ನಿರಂತರವಾಗಿ ಕಾಡಿದವರು ಮಹಾತ್ಮ ಗಾಂಧಿ. ಅಲ್ಲದೆ ಗಾಂಧೀಜಿ ಅವರ ಜೀವನ ಅಧ್ಯಯನ ಬಹು ಪುಣ್ಯಕರ, ಲಾಭದಾಯಕ. ಅವರ ಪ್ರಭಾವ ಅಪಾರ, ಎಂದೂ ಸಹ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕದಲ್ಲಿ ಗಾಂಧೀಜಿ ಬದುಕನ್ನು ತಮ್ಮ ಸಮೃದ್ಧವಾದ ಸಾಹಿತ್ಯದ ಮೂಲಕ ತೆರೆದಿಟ್ಟ ಶ್ರೀ. ಸಿದ್ದನಹಳ್ಳಿ ಕೃಷ್ಣಶರ್ಮರು ಗಾಂಧೀಜಿ ಅವರನ್ನು ಇಂದಿನ “ಯುಗದೇವ” ಎಂದು ಕರೆದಿದ್ದಾರೆ. ಅವರು ಅಂತರಂಗಕ್ಕೆ ಅವಮಾನ ಮಾಡಲಿಲ್ಲ. ಆತ್ಮಸಾಕ್ಷಿಗೆ ವಂಚನೆ ಮಾಡಲಿಲ್ಲ. ಕಂಡ ಸತ್ಯವನ್ನು ಪ್ರಕಟಿಸುತ್ತಾ ಪ್ರಮಾಣಿಸುವುದನ್ನು ನಿಲ್ಲಿಸಲಿಲ್ಲ ಎಂದಿದ್ದಾರೆ ಚಿಂತಕರು. ಗಾಂಧೀಜಿ ಕೇವಲ ಚರ್ಚಿಸುವ ವ್ಯಕ್ತಿಯಲ್ಲ.

ಹೃದಯದಲ್ಲಿಟ್ಟುಕೊಂಡು ಧ್ಯಾನಿಸುವ ವ್ಯಕ್ತಿಯಾಗಿದ್ದಾರೆ. ತಾನು ತಾಯ್ನಾಡಿಗೆ ಸೇವಕ ಎಂದು ಕರೆದುಕೊಂಡು, ಸೇವಕ ಸ್ಥಾನಕ್ಕೂ ಗೌರವ ತಂದುಕೊಟ್ಟು ಸರಳತೆಯನ್ನು ಮೆರೆದವರು ಗಾಂಧಿ. ಸಂತರು ಹೇಳಿದಂತೆ ಗಾಂಧೀಜಿ ಮಾನವೀಯ ಮೌಲ್ಯಗಳ ಸಾರಸಂಗ್ರಹ ರೂಪ. ಗಾಂಧೀಜಿ ಪಯಣಿಸಿದ ದಾರಿಯನ್ನು ವೀಕ್ಷಿಸಿದರೆ ಗಾಂಧೀಜಿ ಎಂಬ ಮಾತು ಜನಜನಿತವಾಗಿರುವುದು ತಿಳಿಯುತ್ತದೆ. ಗಾಂಧೀಜಿ ಎಂಬುದು ಭಾರತಕ್ಕೆ ಒಂದು ಪವಿತ್ರ ಮಂತ್ರ. "ಗಾಂಧೀಜಿ ಅವರ ಚಿಂತನೆಯಲ್ಲಿ ಭಾರತ ಬದುಕಿದೆ" ಎಂದು ಸಹ ಬಣ್ಣಿಸಲಾಗಿದೆ. "ಗಾಂಧೀಜಿ ಭಾರತಕ್ಕೆ ಆತ್ಮವಾದರೆ ವಿಶ್ವಕ್ಕೆ ಮಹಾತ್ಮರಾಗಿದ್ದಾರೆ".

ಮಹಾತ್ಮ ಗಾಂಧೀಜಿ ಕೇವಲ ಒಂದು ದೇಶಕ್ಕೆ, ಭಾಷೆಗೆ, ಒಂದು ಧರ್ಮಕ್ಕೆ ಅಥವಾ ಜಾತಿಗೆ ಸೀಮಿತವಾದ ವ್ಯಕ್ತಿಯಲ್ಲ. ಅವರಲ್ಲಿ ಜಗತ್ತಿನ ಎಲ್ಲ ದಾರ್ಶನಿಕರ, ಎಲ್ಲ ಧರ್ಮಗಳ ಮಾನವೀಯ ಮೌಲ್ಯಗಳು ಇರುವುದನ್ನು ಕಾಣಬಹುದು. ಮೊದಲೇ ತಿಳಿಸಿದಂತೆ ಗಾಂಧೀಜಿ ಅವರಲ್ಲಿ ಬುದ್ಧ, ಬಸವೇಶ್ವರ, ಮಹಾವೀರ, ಮಹಮ್ಮದ್ ಪೈಗಂಬರ್, ಜೀಸಸ್, ಸ್ವಾಮಿ ವಿವೇಕಾನಂದ, ಡಾ॥ ಬಿ.ಆರ್. ಅಂಬೇಡ್ಕರ್, ಮಹಾತ್ಮ ಫುಲೆ ಮೊದಲಾದ ದಾರ್ಶನಿಕರನ್ನು ಹಾಗೂ ಸಾಧಕರನ್ನು ಕಾಣಬಹುದು. ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಒಬ್ಬರನ್ನು ಮತ್ತೊಬ್ಬರ ಮೇಲೆ ಎತ್ತಿ ಕಟ್ಟಿ, ನಮ್ಮ ಧರ್ಮ, ಜಾತಿಯೇ ಶ್ರೇಷ್ಠವಾದುದು ಅನ್ಯರ ಜಾತಿ, ಧರ್ಮವು ಕನಿಷ್ಠ ಎಂಬ ನಿಷೇದಾತ್ಮಕ ಭಾವನೆಯನ್ನು ತೊಡೆದು ಹಾಕುವ ಅನಿವಾರ್ಯತೆ ಇದೆ. ಈ ಕಾರಣದಿಂದ ಗಣ್ಯರ ಮಾನವೀಯ ಮೌಲ್ಯಗಳನ್ನು ಯುವಜನರಲ್ಲಿ ಬಿತಿ ಸ್ವಚ್ಚ, ನಂಬಿಕೆಯ, ಪ್ರೀತಿಯ, ನೆಮ್ಮದಿಯ ಸಮಾಜ ನಿರ್ಮಾಣ ನಮ್ಮೆಲ್ಲರ ಜೀವನದ ಧ್ಯೇಯವಾಗಬೇಕು. ನಾವು ಇವರೆಲ್ಲರ ಸ್ಮರಣೆ ಮಾಡಿದ ವರದಿಯು ಆ ಮಹಾನ್ ಸಾಧಕರಿಗೆ ತಲುಪುವುದಿಲ್ಲ. ಆದರೂ ಅವರ ಬದುಕು ಮತ್ತು ವಿಚಾರಗಳ ಸ್ಮರಣೆಯಿಂದ ಮುಂದಿನ ಪೀಳಿಗೆಯ ಬದುಕು ಕಟ್ಟಿ ಅವರಲ್ಲಿ ಆತ್ಮವಿಶ್ವಾಸವನ್ನುಂಟು ಮಾಡಲು ಸಾಧ್ಯವಿದೆ. ಯುವಜನರನ್ನು ಸಾಧಕರ ವಿಚಾರಗಳಿಂದ ಯುವಜನರಲ್ಲಿ . ಗಟ್ಟಿಯಾದ ವ್ಯಕ್ತಿತ್ವ ಹೊಂದುವಂತೆ ಮಾಡದೆ ಹೋದರೆ ನಷ್ಟ ಆಗುವುದು ಈ ಮಹಾನ್ ಚೇತನಗಳಿಗಲ್ಲ ಉತ್ತಮ ಸಮಾಜದ ಭವಿಷ್ಯಕ್ಕೆ ಸುಂದರ ಬದುಕಿನ

ಕನಸು ಕಟ್ಟಿಕೊಂಡಿರುವ ಯುವ ಸಮುದಾಯಕ್ಕೆ. ಮಹಾನ್ ಸಾಧಕರು ಮನುಕುಲಕ್ಕೆ ಎಷ್ಟು ಅನಿವಾರ್ಯ ಎಂಬುದನ್ನು 1937ರಲ್ಲಿ ಜಗತ್ತಿನ ಶ್ರೇಷ್ಠ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೀನ್ ಕೊಲಂಬಿಯಾ ವಿಶ್ವ ವಿದ್ಯಾಲಯದ ಘಟಿಕೋತ್ಸವ ಭಾಷಣದಲ್ಲಿ "ಗಣ್ಯ ಹಾಗೂ ಪರಿಶುದ್ಧ ವ್ಯಕ್ತಿಗಳ ಉದಾಹರಣೆ ಯೊಂದೇ ನಮ್ಮನ್ನು ಉತ್ತಮ ಆಲೋಚನೆ ಮತ್ತು ಕಾರ್ಯಗಳೆಡೆಗೆ ಕರೆದೊಯ್ಯುತ್ತವೆ" ಎಂದು ಹೇಳಿದ ಮಾತು ಗಾಂಧೀಜಿ ಅವರಂತಹ ದಾರ್ಶನಿಕರ ವ್ಯಕ್ತಿವಿಚಾರಗಳ ಮಹತ್ವ ತಿಳಿಸುತ್ತವೆ.

ಇಂದಿನ ಯುವಜನರಿಗೆ ಬೇಕಿರುವುದು ಕಟುಟೀಕೆ, ವಿಮರ್ಶೆ, ನಿಂದನೆಗಳಲ್ಲ. ಯತಾರ್ಥ, ಆದರ್ಶ ಹಾಗೂ ಯೋಗ್ಯ ಮಾರ್ಗದರ್ಶನ. ಅವರ ಉತ್ತಮ ಜೀವನಕ್ಕೆ ಬೇಕಾದುದು ಶಿಸ್ತು, ಸರಳತೆ, ಪ್ರಾಮಾಣಿಕತೆ, ಭ್ರಾತೃತ್ವ, ಮಾನವೀಯ ಮೌಲ್ಯಗಳು ಮತ್ತು ಸಂಸ್ಕಾರ ಇವೇ ಉತ್ತಮ ಗುಣಗಳು ಎಲ್ಲಿಂದಲೋ ದಿಢೀರನೆ ಬರುವುದಿಲ್ಲ. ಅವುಗಳನ್ನು ಮಾರುಕಟ್ಟೆಯಲ್ಲಿ ಕೊಂಡು ತರಲು ಆಗುವುದಿಲ್ಲ. ಬದುಕು ಸಾರ್ಥಕವಾಗಬೇಕಾದರೆ ಜೀವನದ ಮೌಲ್ಯಗಳನ್ನು ಉತ್ತಮ ಶಿಕ್ಷಣ, ಪರಿಸರ, ಸಾಧಕರ, ದಾರ್ಶನಿಕರ ಮತ್ತು ಚಿಂತಕರ ವ್ಯಕ್ತಿ ವಿಚಾರಗಳನ್ನು ಅವರ ಮನಸ್ಸು ಮತ್ತು ಹೃದಯಕ್ಕೆ ಚಿತ್ತಿ ಪರಿಣಾಮ ಉಂಟುಮಾಡಿದರೆ ಮಾತ್ರ ಸಾಧ್ಯ. ಇದನ್ನೆಲ್ಲಾ ಗಮನಿಸಿ ವ್ಯಕ್ತಿ ಮತ್ತು ಸಮಷ್ಟಿಯ ಸ್ವಾಸ್ಥ್ಯಕ್ಕೆ ಈ ಅಂಶಗಳು ಅನಿವಾರ್ಯ ಹಾಗೂ ಅವಶ್ಯಕವಾದುದರಿಂದ ಗಾಂಧೀಜಿ ಅವರು ನುಡಿದಂತೆ ನಡೆದು ಬದುಕಿದ ವಿಚಾರಗಳ ಬಗ್ಗೆ ವಿಶ್ವದ ಗಣ್ಯರ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ನೀಡಲಾಗಿದೆ.

ವಿಶ್ವದಲ್ಲಿ ಗಾಂಧೀಜಿ ಅವರ ಬಗ್ಗೆ ಪ್ರಕಟವಾಗಿರುವ ಸಾಹಿತ್ಯ ಜಗತ್ತಿನ ಯಾರ ಬಗ್ಗೆಯೂ ಈ ಪ್ರಮಾಣದಲ್ಲಿ ಪ್ರಕಟವಾಗಿರಲಾರದು. ಗಾಂಧೀಜಿಯವರ ಬಗ್ಗೆ 450ಕ್ಕೂ ಹೆಚ್ಚು ಜೀವನ ಚರಿತ್ರೆಗಳು ಪ್ರಕಟಗೊಂಡಿವೆ. ಒಚಿದು ಅಧ್ಯನದ ಪ್ರಕಾರ ಜಗತ್ತಿನ ಬಹುಪಾಲು ಎಲ್ಲ ಭಾಷೆಗಳಲ್ಲಿ ಗಾಂಧೀ ಸಾಹಿತ್ಯ ಪ್ರಕಟವಾಗಿದ್ದು, ಆ ಶೀರ್ಷಿಕೆಗಳ ಒಟ್ಟು ಸಂಖ್ಯೆ ಸುಮಾರು 32 ಸಾವಿರ. 260ಕ್ಕೂ ಹೆಚ್ಚು ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಗಾಂಧಿ ಶಾಂತಿ ಸಂಶೋಧನಾ ಕೇಂದ್ರಗಳು

ಸ್ಥಾಪಿತವಾಗಿವೆ. 300ಕ್ಕೂ ಹೆಚ್ಚು ಸ್ಟಾಂಪ್‌ಗಳು ಪ್ರಕಟವಾಗಿರುವುದು ಅವರ ವ್ಯಕ್ತಿ ವಿಚಾರಗಳ ಜನಪ್ರಿಯತೆಯನ್ನು ತಿಳಿಸುತ್ತದೆ. ಅಲ್ಲದೆ 2014ರಲ್ಲಿ ಪ್ರಕಟವಾಗಿರುವ ಚೀನಾ ದೇಶದ ಮಾಹಿತಿ ಪತ್ರಿಕೆ ಪ್ರಕಾರ ಚೈನಾದಲ್ಲಿ ಪೂರ್ವ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾನಿಲಯದ ಮಟ್ಟದವರೆಗೆ ಗಾಂಧಿ ವಿಚಾರಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಗಾಂಧಿ ವಿಚಾರಗಳು ಹೆಚ್ಚು ಪ್ರಸ್ತುತ ಎಂಬುದಕ್ಕೆ ಮತ್ತೊಂದು ನಿದರ್ಶನವೆಂದರೆ 1981 ಜೂನ್ 24ರಂದು ಜಗತ್ತಿನ 53 ಜನ ನೊಬೆಲ್ ಪ್ರಶಸ್ತಿ ವಿಜೇತರು ಪ್ರಸ್ತುತ ಜಾರಿಯಲ್ಲಿರುವ ವಿಶ್ವದ ರಾಜಕೀಯ, ಆರ್ಥಿಕ ವಿಚಾರಗಳಿಂದ ಬಹುದೊಡ್ಡ ಅಪಾಯವಿದೆ. ಅದಕ್ಕೆ ಇರುವುದೊಂದೇ ಮಾರ್ಗವೆಂದರೆ ಗಾಂಧೀಜಿಯವರ ರಾಜಕೀಯ, ಆರ್ಥಿಕ ವಿಚಾರಗಳನ್ನು ಅನುಷ್ಠಾನಗೊಳಿಸುವುದಾಗಿದ್ದು, ಅದಕ್ಕಾಗಿ ಮನವಿ ಮಾಡಿರುವುದು ಇಲ್ಲಿ ಉಲ್ಲೇಖಾರ್ಹ ಸಂಗತಿಯಾಗಿದೆ.

1994ರ ಡಿಸೆಂಬರ್ 4ರಂದು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ **"ಗಾಂಧಿ, ಮಾರ್ಕ್ಸ್ ಮತ್ತು ಮಾರ್ಕೆಟ್"** ಎಂಬ ಒಂದು ಲೇಖನದ ಪ್ರಕಾರ ವಿಶ್ವಸಂಸ್ಥೆಯ ಹಣಕಾಸು ಸಮಿತಿ ತಾನು ಆರ್ಥಿಕ ನೆರವು ನೀಡಿದ ರಾಷ್ಟ್ರಗಳಿಗೆ ತಪಾಸಣೆಗೆ ತೆರಳಿತು. ಅಲ್ಲಿ ವಿಶ್ವಸಂಸ್ಥೆಯ ಆರ್ಥಿಕ ನೆರವಿನ ದುರುಪಯೋಗವಾದ ಬಗ್ಗೆ ತಿಳಿದು "ಈ ಪರಿಸ್ಥಿತಿ ಮುಂದುವರಿದರೆ ವಿಶ್ವದ ಎಷ್ಟೋ ಪ್ರಮಾಣದ ಭಂಡಾರವು ಸಹ ಜಗತ್ತಿನ ಸಮಸ್ಯೆಯನ್ನು ಬಗೆಹರಿಸಲಾರದು. ಅದಕ್ಕೆಲ್ಲಾ ಇರುವುದೊಂದೇ ಪರಿಹಾರ ಮಾರ್ಗವೆಂದರೆ ಗಾಂಧಿ ಮಾರ್ಗ" ಎಂದು ಅಭಿಪ್ರಾಯಪಟ್ಟಿರುವುದು ಗಾಂಧಿವಿಚಾರಗಳ ಮಹತ್ವವನ್ನು ಸಾರುತ್ತದೆ. ಇಂದು ಜಗತ್ತಿಗೆ ಬೇಕಿರುವುದು ಲಕ್ಷ ಲಕ್ಷ ಸಂಖ್ಯೆಯ ಗಾಂಧೀಜಿಗಳೇ ವಿನಃ ಲಕ್ಷ ಲಕ್ಷ ಬಿಲಿಗೇಟ್ಸ್ ಅಲ್ಲ. ನಮ್ಮ ದೇಶದ ಕರೆನ್ಸಿಯಲ್ಲಿರುವ (ನೋಟುಗಳು) ಗಾಂಧೀಜಿಯವರನ್ನು ಜನರ ಹೃದಯದೊಳಕ್ಕೆ ಒಂದಷ್ಟು ಬಿಟ್ಟುಕೊಳ್ಳಬೇಕಿದೆ.

ಗಣ್ಯರು ನೀಡಿರುವ ಅಭಿಪ್ರಾಯಗಳಿಂದ ಗಾಂಧೀಜಿ ಅವರ ವ್ಯಕ್ತಿತ್ವದ ಹಿರಿಮೆ ನಮಗೆ ತಿಳಿಯುತ್ತದೆ. ಇದರ ಪ್ರಕಾರ ಇಂದಿನ ಜಗತ್ತಿನ ಎಲ್ಲ ಜಟಿಲ ಸಮಸ್ಯೆಗಳಿಗೆ ಗಾಂಧೀಜಿ ಅವರ ವಿಚಾರಗಳಲ್ಲಿ ಪರಿಹಾರವಿದೆ. ಈ ಕಾರಣದಿಂದಲೇ ನಮ್ಮ ರಾಷ್ಟ್ರ ಪಿತನನ್ನು ತಿಳಿದ


ಬದುಕುವುದೇ ನಿಜವಾದ ಸಾರ್ಥಕ ಜೀವನವೆನ್ನಬಹುದು. ನಾವು ಹೊಸದಾಗಿ ಯಾವ ಸಾಹಿತ್ಯ ವಿಚಾರಗಳನ್ನು ಗಾಂಧೀಜಿ ಅವರ ಬಗ್ಗೆ ಸೃಷ್ಟಿಸುವ ಅಗತ್ಯವಿಲ್ಲ. ಪ್ರಸ್ತುತ ನಮ್ಮಲ್ಲಿ ಲಭ್ಯವಿರುವ ಈ ಅಂಶಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ಕಾರ್ಯ ತ್ವರಿತವಾಗಿ, ಆಂದೋಲನದೋಪಾದಿಯಲ್ಲಿ ಆಗಬೇಕಿದೆ. ಗಾಂಧೀಜಿಗೆ ನಾವು ಇಂದು ಸಲ್ಲಿಸಬೇಕಾದದ್ದು ಕೇವಲ ನುಡಿನಮನ ಅಲ್ಲ, ನಡೆನಮನ. ಗಾಂಧೀಜಿ ಅವರನ್ನು ತಿಳಿಯುವ ಆಸಕ್ತಿ ಎಲ್ಲರಲ್ಲಿ ಮೂಡಲಿ ಎಂಬ ಆಶಯದಿಂದ ಗಣ್ಯರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ತಿಳಿಸುವ ಸಣ್ಣ ಪ್ರಯತ್ನ ಮಾಡಿದ್ದೇನೆ. ಪ್ರಾರಂಭದಲ್ಲೆ ಕೆಲವು ವಿಚಾರಗಳನ್ನು ನಿಮ್ಮಲ್ಲಿ ಹಂಚಿಕೊಳ್ಳುವ ದೃಷ್ಟಿಯಿಂದ ಸುರ್ಧೀರ್ಘವಾಗಿ ಪ್ರಸ್ತಾಪಿಸಿದ್ದೇನೆ. ದಯಮಾಡಿ ಸ್ವೀಕರಿಸಿ.

ಈ ಪುಸ್ತಕವನ್ನು ಪ್ರಕಟಿಸಲು ನೆರವು ನೀಡಿದ ಗಾಂಧೀ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರಿಗೂ, ಗೌ॥ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾಕೃಷ್ಣಪ್ಪ ಅವರಿಗೂ, ಪ್ರೀತಿಯಿಂದ ಬೆನ್ನುಡಿ ಬರೆದು ಪ್ರೋತ್ಸಾಹಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಅವರಿಗೂ. ಮುದ್ರಿಸಿಕೊಟ್ಟ ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಆರ್. ದಯಾನಂದ ಸಾಗರ್ ಮತ್ತು ಶ್ರೀ ಆರ್. ರವಿಪ್ರಕಾಶ್ ಸಹೋದರರಿಗೂ, ಡಿ.ಟಿ.ಪಿ. ಸೇವೆ ನೀಡಿದ ಎಸ್.ಆರ್. ಗ್ರಾಫಿಕ್ಸ್ (ಗೀತಾ) ಅವರಿಗೂ ನನ್ನ ಕೃತಜ್ಞತೆಗಳು.

ಎರಡನೆಯ ಮುದ್ರಣಕ್ಕೆ ಸಹಕರಿಸಿದ ಸಹೃದಯ ಓದುಗರಿಗೆ ಕೃತಜ್ಞತೆಗಳು.

ಪ್ರೊ॥ ಜಿ.ಬಿ. ಶಿವರಾಜು
ಉಪಾಧ್ಯಕ್ಷ, ಗಾಂಧೀಭವನ, ಬೆಂಗಳೂರು
9449609127

ದಿನಾಂಕ 30–01–2019



ಆಲ್ಬರ್ಟ್ ಐನ್‌ಸ್ಟೀನ್

ನೋಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ

"ಇಂತಹ ವ್ಯಕ್ತಿಯೊಬ್ಬ ದೇಹಧಾರಿಯಾಗಿ ಈ ನೆಲದ ಮೇಲೆ ನಡೆದಾಡಿದರೆಂಬುದನ್ನು ಮುಂದಿನ ಪೀಳಿಗೆ ನಂಬುವುದು ವಿರಳ."

"ಅವರು ತಮ್ಮದೇ ಆದ ಸಿದ್ಧಾಂತ ಅಹಿಂಸಾ ತತ್ವಕ್ಕೆ ಬಲಿಯಾದರು. ತಮ್ಮ ದೇಶದಲ್ಲಿ ಅವ್ಯವಸ್ಥೆ ಅಶಾಂತಿಗಳ ಸಮಯದಲ್ಲಿ ಅವರು ಯಾವುದೇ ವೈಯಕ್ತಿಕ ರಕ್ಷಣೆಯನ್ನು ನಿರಾಕರಿಸಿದರು. ನ್ಯಾಯವಾಗಿ ಹೋರಾಡುವವರು ಬಲಪ್ರಯೋಗವನ್ನು ಪೂರ್ಣವಾಗಿ ತ್ಯಜಿಸಬೇಕೆಂಬುದು ಅವರ ಅಚಲ ನಂಬಿಕೆಯಾಗಿತ್ತು. ಈ ನಂಬಿಕೆಗೆ ಅವರು ತಮ್ಮ ಇಡೀ ಬದುಕನ್ನು ಸಮರ್ಪಿಸಿದರು. ಈ ನಂಬಿಕೆಯನ್ನು ಹೃದಯ ಮತ್ತು ಮನಸ್ಸುಗಳಲ್ಲಿ ತುಂಬಿಕೊಂಡು ಮಹಾನ್ ರಾಷ್ಟ್ರವೊಂದನ್ನು ಸ್ವಾತಂತ್ರ್ಯದತ್ತ ನಡೆಸಿದರು. ಜನರ ನಿಷ್ಠೆಯನ್ನು ಗೆಲ್ಲುವುದು ಕೇವಲ ರಾಜಕೀಯ ತಂತ್ರ ಮತ್ತು ಉಪಾಯಗಳಿಂದಲ್ಲ ನೈತಿಕವಾಗಿ ಹಾಗೂ ಉದಾತ್ತವಾದ ಜೀವನ ಮಾರ್ಗದ ಜೀವಂತ ನಿದರ್ಶನದ ಮೂಲಕ ಎಂಬುದನ್ನವರು ತೋರಿಸಿಕೊಟ್ಟರು."

"ನೈತಿಕ ಮೌಲ್ಯಗಳು ಕ್ಷೀಣಿಸುತ್ತಿರುವ ಈ ಯುಗದಲ್ಲಿ ರಾಜಕೀಯ ಕ್ಷೇತ್ರದಲ್ಲಿ ನಾವು ಆದರ್ಶವಾಗಿಟ್ಟುಕೊಳ್ಳಬೇಕಾದ ಮಾನವ ಸಂಬಂಧಗಳ ಉನ್ನತ ಕಲ್ಪನೆಯನ್ನು ಪ್ರತಿನಿಧಿಸಿದ ಏಕೈಕ ವ್ಯಕ್ತಿ ಗಾಂಧೀಜಿ."


"ಗಾಂಧೀಜಿ ನಮ್ಮ ಕಾಲದ ರಾಜಕೀಯ ವ್ಯಕ್ತಿಗಳಲ್ಲೆಲ್ಲಾ ಅತ್ಯಂತ ತೀಕ್ಷ್ಣ ದೃಷ್ಟಿಯುಳ್ಳವರೆಂಬುದು ನನ್ನ ನಂಬಿಕೆ. ಅವರ ತತ್ವಗಳಿಗನುಗುಣವಾಗಿ ಕೆಲಸಮಾಡಲು ನಾವು ಪ್ರಯತ್ನಿಸಬೇಕು. ನಮ್ಮ ಉದ್ದೇಶಕ್ಕಾಗಿ ಹೋರಾಡುವಲ್ಲಿ ಹಿಂಸೆಯನ್ನು ಬಳಸಕೂಡದು. ಕೆಟ್ಟದ್ದೆಂದು ನಾವು ನಂಬಿರುವ ಯಾವುದರಲ್ಲಿಯೂ ಭಾಗವಹಿಸಬಾರದು ಎಂದು ನಂಬಿ ಬದುಕಿದವರು.

"ಅತ್ಯಂತ ಶ್ರೇಷ್ಠವೇತ್ತರನ್ನೂ, ವಿಜ್ಞಾನಿಗಳನ್ನು, ರಾಜ್ಯಶಾಸ್ತ್ರಜ್ಞರನ್ನೂಪಡೆದಿದ್ದರೂ", ನಮ್ಮ ಕಾಲದ ರಾಜಶಾಸ್ತ್ರ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ವಿಫಲವಾಗಿವೆ. ವಿಶ್ವಶಾಂತಿ ಮತ್ತು ಅಂತರರಾಷ್ಟ್ರೀಯ ಸೌಹಾರ್ದಯುತ ಸಹಕಾರಕ್ಕೆ ಬುನಾದಿಯಾಗುವ ರಾಜಕೀಯ ಮತ್ತು ಆರ್ಥಿಕ ರಚನೆಗಳನ್ನು ರೂಪಿಸಿಕೊಳ್ಳಲು ಅಸಮರ್ಥವಾಗಿದ್ದೇವೆ. ನಮ್ಮ ಕಾಲದ ಎಲ್ಲ ರಾಜನೀತಿಜ್ಞರಲ್ಲಿ ಮಹಾತ್ಮ ಗಾಂಧಿಯವರ ವಿಚಾರಗಳೇ ಅತ್ಯಂತ ಪ್ರಜ್ಞಾಪೂರ್ವಕ ನಿಲುವು ಎನಿಸುತ್ತದೆ. ಅವರು ಸೂಚಿಸಿರುವ ರೀತಿಯಲ್ಲಿ ಅವರ ನಿಷ್ಠೆಗಳನ್ನಂಗೀಕರಿಸಿ ನಾವೆಲ್ಲಾ ಪ್ರಮಾಣಿಕಪ್ರಯತ್ನಮಾಡಬೇಕು"

"ಹಿಂಸಾರಹಿತ ಕ್ರಾಂತಿ, ಗಾಂಧಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ವಿಧಾನ, ಅಂತರಾಷ್ಟ್ರೀಯ ಬುನಾದಿಯ ಮೇಲೆ ವಿಶ್ವಕ್ಕೆ ಶಾಂತಿಯನ್ನು ದೊರಕಿಸುವುದು. ಇಂತಹ ಗಾಂಧಿ ಮಾರ್ಗದ ಬಳಕೆಯಿಂದ ಮಾತ್ರವೇ ವಿಶ್ವದ ಸಮಸ್ಯೆಗಳು ಪರಿಹಾರವಾಗುವುದೆಂದು ನನ್ನ ನಂಬಿಕೆ".

(ಆಲ್ಬರ್ಟ್ ಐನ್‌ಸ್ಟೀನ್ ಅವರು ತಾನು 1935ರಲ್ಲಿ ಅಮೇರಿಕಾದಲ್ಲಿ ಖರೀದಿಸಿದ್ದ ಹೊಸಮನೆಗೆ ಯಾವ ಅಲಂಕಾರಕ್ಕೂ ಒಪ್ಪಲಿಲ್ಲ. ಆದರೆ ಅವರ ಕೊಠಡಿಯಲ್ಲಿ ಗಾಂಧೀಜಿ ಅವರ ಚಿತ್ರ ಮಾತ್ರ ಇತ್ತು. ಸ್ನೇಹಿತರು ಕೇಳಿದಾಗ ಗಾಂಧೀಜಿ ಜಗತ್ತಿನ ಶ್ರೇಷ್ಠ ಮಾನವತಾವಾದಿ ಎಂದು ಕೊಂಡಾಡಿದರು).

—o—



ರೊಮಾರೋಲಾ

ಫ್ರಾನ್ಸಿನ ನೋಬೆಲ್ ಪ್ರಶಸ್ತಿ ಪುರಸ್ಕೃತರು

"ಗಾಂಧಿಯನ್ನು ಯುರೋಪಿನ ಯಾವ ಕ್ರಾಂತಿಕಾರಿ ನಾಯಕ ನೊಡನೆಯೂಹೋಲಿಸಲು ಸಾಧ್ಯವಿಲ್ಲ. ಕೇವಲ ಶಾಸನಗಳನ್ನು, ತೀರ್ಪುಗಳನ್ನು ಸೃಷ್ಟಿ ಮಾಡುವ ಹಂಬಲವಲ್ಲ ಅವರದು. ಒಂದು ನೂತನ ಮಾನವೀಯತೆಯನ್ನೇ ತಮ್ಮ ತ್ಯಾಗ ಬಲಿದಾನಗಳಿಂದ ಜೀವಂತ ಗೊಳಿಸುತ್ತಿದ್ದಾರೆ. ತಮ್ಮ ಸಮಕಾಲೀನ ಚಿಂತನೆಗಳಿಗಿಂತ ಬಹುದೂರದ ಭವಿಷ್ಯವನ್ನು ರೂಪಿಸುತ್ತಿದ್ದರೂ ತಮ್ಮ ಜನತೆಯ ತಾತ್ಕಾಲಿಕ ಬೃಹತ್ ಸಮಸ್ಯೆಗಳಿಗೆ ವಿಮುಖರಾಗಿಲ್ಲ.

ಗೆಲುವಿನಲ್ಲಿ ಅಟ್ಟಹಾಸವಾಗಲಿ, ವೈಯಕ್ತಿಕ ಡಾಂಬಿಕತನವಾಗಲಿ ಅವರಲ್ಲಿ ಸುಳಿಯದು. ವಾಸ್ತವವಾಗಿ ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿಯೇ ಉಳಿದಿದ್ದಾರೆ"

"ತಮ್ಮ ಕೊಕ್ಕರೆಯಂತಹ ಕಾಲುಗಳನ್ನು ಚಟುವಟಿಕೆಯಿಂದ ಮುಂದಕ್ಕೆ ಹಾಕುತ್ತಾ, ರೈಲುಗಾಡಿಯ ಮೆಟ್ಟಿಲುಗಳನ್ನು ಹತ್ತುವ ಮುನ್ನ ಗಾಂಧೀ ನನ್ನನ್ನು ಗಾಢವಾಗಿ ಆಲಂಗಿಸಿದರು. ಯಾವುದೋ ಅನಿರ್ವಚನೀಯ ಭಾಂದವ್ಯ ನಮ್ಮ ಬದುಕುಗಳನ್ನು ಹೊಸದಿತ್ತು. ಕೊನೆಯ ಬಾರಿಗೆ ಅವರ ಬೋಳುತಲೆ ನನ್ನ ಹೆಗಲ ಮೇಲೆ ಒರಗಿತ್ತು. ನನ್ನ ಕೆನ್ನೆಗಳಿಗೆ ಅದರ ಮಧುರ ಸ್ಪರ್ಶದ ಅನುಭವವಾಯಿತು. ನಂತರ ಮೀರ ನನ್ನ ಕೈಗಳನ್ನು ಬೀಸುತ್ತಾ, ಹೋಗಿ ಬನ್ನಿ ಎಂದು ಹೇಳಿದೆ. ರೈಲು ಕಣ್ಮರೆಯಾಗುವವರೆಗೂ ನೋಡುತ್ತಲೇ ಇದ್ದೆ. ಮನೆಗೆ ಬಂದಾಗ ಹೃದಯ ತುಂಬಿತ್ತು.

– **ರೊಮಾ ರೋಲಾ** (ಗಾಂಧಿ ಪರಿವಾರವನ್ನು ಸ್ವಿಸ್‌ನ ವಿಲ್ಲೆ
ರೈಲು ನಿಲ್ದಾಣದಲ್ಲಿ ಬೀಳ್ಕೊಟ್ಟಾಗ ಹೇಳಿದ ಮಾತು)
(ರೊಮಾರೋಲಾ ಅವರು ಆತ್ಮಕಥೆಯಲ್ಲಿ ಗಾಂಧಿ ಬಗ್ಗೆ 30 ಪುಟ ಬರೆದಿದ್ದಾರೆ)

"ಶ್ರದ್ಧೆಯೇ ಒಂದು ಸಮರ. ಅಹಿಂಸಾಮಾರ್ಗ ಒಂದು ಅಂತಿಮ ಅಮರ. ದುರ್ಬಲರಿಗೆ ಶಾಂತಿ ದೊರೆಯುವುದಿಲ್ಲ. ನಮ್ಮ ದೌರ್ಬಲ್ಯಗಳ ವಿರುದ್ಧವಾಗಿ ನಾವು ಹೋರಾಡಬೇಕಾಗಿದೆ. ಹಿಂಸೆ ತಾನಾಗಿಯೇ ಹಿಂದೆ ಸರಿಯುತ್ತದೆ. ಇದೇ ಗಾಂಧಿ ಜೀವನ ಸಂದೇಶ. ಪೌರಾತ್ಯ ದೇಶಗಳ ಆತ್ಮಶಕ್ತಿಯನ್ನು ಗಾಂಧೀಜಿ ಉದ್ದೀಪನಗೊಳಿಸಿದ್ದರೆ, ಅದರ ಅಲೆಗಳು ವಿಶ್ವವ್ಯಾಪ್ತಿಯಾಗಿ ಪಸರಿಸುತ್ತದೆ. ಭಾರತದ ಧಾರ್ಮಿಕ ಶಕ್ತಿ ಅಜೇಯವಾಗುತ್ತದೆ. ಗಾಂಧೀ ಸತ್ಯವು ವಿಜಯಗಳಿಸಿಯೇ ತೀರುತ್ತದೆ. ಈ ಹಿಂದೆ ಕ್ರೈಸ್ತ, ಬುದ್ಧರ ಮಹಾ ತೇಜಸ್ವಿ ಚೈತನ್ಯದಂತೆ ಜಗತ್ತಿನಲ್ಲೆಲ್ಲಾ ವ್ಯಾಪಿಸಿ ಮೂರ್ತರೂಪ ಪಡೆದು ನಿಲ್ಲುತ್ತದೆ. ದೈವ, ಮಾನವ ರೂಪದಲ್ಲಿ ಸಾಕಾರಗೊಂಡು ಒಂದು ನೂತನ ಮಾನವಕುಲವನ್ನು ಹೊಸ ಮಾರ್ಗದಲ್ಲಿ ನಡೆಸಿ ವಿಜಯಿಯಾಗುವುದು ಸತ್ಯ."

—o—



ಮೀರಾಬೆನ್

ಗಾಂಧಿ ವಿಚಾರಗಳಿಂದ ಪ್ರಭಾವಿತರಾದ
ಇಂಗ್ಲೆಂಡಿನ ಮೆಡಲಿನಾಸ್ಲೇಡ್

"ಈಜಿಪ್ಟ್ ಪ್ರವಾಸ ಮುಗಿಸಿ ಹಿಂತಿರುಗಿದಾಗ ಪ್ಯಾರಿಸ್ಸಿನ ಪುಸ್ತಕ ಭಂಡಾರದ ಕೀಟಕಿಯ ತುಂಬಾ ಕಿತ್ತಳೆ ಬಣ್ಣದ ಸಣ್ಣ ಪುಸ್ತಕದ ಪ್ರತಿಗಳು ಎದ್ದು ಕಾಣಿತ್ತಿದ್ದವು "ಮಹಾತ್ಮಗಾಂಧಿ" ಎಂಬ ರೊಮಾ ರೋಲಾ ಅವರು ಬರೆದ ಕೃತಿಯನ್ನು ಕೊಡಲೇ ಕೊಂಡು ಓದತೊಡಗಿದೆ. ಊಟದ ಸಮಯದಲ್ಲಿ ಅದನ್ನು ಬಿಡಲಾದಗೆ ಓದಿ ಮುಗಿಸಿದೆ. ನನ್ನ ಅಂತರಾಳದ ತುಮುಲಗಳಿಗೆಲ್ಲಾ ಉತ್ತರ ಸಿಕ್ಕಿದಂತೆ ಭಾಸವಾಯಿತು. ಭಾರತದಲ್ಲಿ ದಲಿತರಾದ ಮೂಲಕ ಜನಕೋಟಯ ವಿಮೋಚನೆಗಾಗಿ ಸತ್ಯ ಮತ್ತು ಅಹಿಂಸೆಗಳನ್ನು ಅಂಗೀಕರಿಸಿ ಹೋರಾಡುತ್ತಿದ್ದ ಗಾಂಧಿ ಅವರ ಸಂದೇಶ ಇಡೀ ಮಾನವ ಲೋಕದ ಮುಕ್ತಿಗಾಗಿ ಎನಿಸಿತು. ಕೂಡಲೇ ಭಾರತಕ್ಕೆ ಹೊರಡುವ ಸಂಕಲ್ಪ ಮಾಡಿಬಿಟ್ಟೆ".

"ಸಬರಮತಿ ಆಸ್ರಮದ ಒಳಗೆ ಹೋಗುತ್ತಿದ್ದ ಹಾಗೆಯೇ ಒಂದು ಕಂದು ಬಣ್ಣದ ವ್ಯಕ್ತಿ ನನ್ನೆಡೆಗೆ ಬಂದಿತು, ಆತನನ್ನು ನೋಡಿದಾಗ ನನಗೆ ಒಂದು ಜ್ಯೋತಿಯನ್ನು ಕಂಡಂತೆ ಆಯಿತು. ಅವನೆದುರಿಗೆ ಮಂಡಿಯೂರಿದೆ, ಕೈಗಳು ಸ್ನೇಹದಿಂದ ನನ್ನತ್ತ ಚಾಚಿದವು, ಒಂದು ಧ್ವನಿ ಹೇಳಿತು, ನೀನು ನನ್ನ ಮಗಳಾಗಿರುವೆ ಎಂದು".

"ಕಾರ್ಯಾರ್ಥವಾಗಿ ಇಂಗ್ಲೆಂಡಿಗೆ ಬಂದೆ, ಇಲ್ಲದಿದ್ದರೆ ಬರುತ್ತಿರಲಿಲ್ಲ. ಇಲ್ಲಿಗೆ ಬಂದದ್ದು ನನಗೆ ಯಾವುದೋ ಒಂದು ಪರದೇಶಕ್ಕೆ ಬಂದ ಹಾಗಿದೆ. ನನ್ನ ಜೀವ ಹಿಂದೂಸ್ಥಾನದಲ್ಲೇ ಇದೆ. ಎಂದಿಗೂ ಅಲ್ಲೆ ಇದ್ದೀತು".

– **ಮೀರಾಬೆನ್** (ದುಂಡು ಮೇಜಿನ ಪರಿಷತ್‌ನಲ್ಲಿ ಭಾಗವಹಿಸಲು ಭಾರತದಿಂದ ಇಂಗ್ಲೆಂಡಿಗೆ ಹಿಂತಿರುಗಿದಾಗ)

"ಗಾಂಧಿ ಜೊತೆ ಇಂಗ್ಲೆಂಡಿಗೆ ದುಂಡ ಮೇಜಿನ ಪರಿಕ್ಷರಣೆಗೆ ಬಂದಾಗ "ನನಗಿದ್ದವರು ಇಬ್ಬರೆ ; ಬಾಪು ಮತು ಭಗವಂರ್ತ ಈಗ ಅವರಿಬ್ಬರೂ ಒಂದಾಗಿಬಿಟ್ಟಿದ್ದಾರೆ.".



ಗೋಪಾಲಕೃಷ್ಣ ಗೋಖಲೆ

(ಗಾಂಧೀಜಿಯವರ ರಾಜಕೀಯ ಗುರು)

"ಈಗ ಇರುವಂತೆ ಗಾಂಧಿಯೊಂದಿಗೆ ವೈಯಕ್ತಿಕ ಸಂಪರ್ಕವನ್ನುಹೊಂದಿದವರಿಗೆ ಮಾತ್ರ ಅವರ ವ್ಯಕ್ತಿತ್ವದ ಅದ್ಭುತ ಅರ್ಥವಾಗುತ್ತದೆ. ನಿಸ್ಸಂದೇಹವಾಗಿ ಅವರು ಧೀರರು, ಹುತಾತ್ಮರ ಸತ್ವದಿಂದ ಮಾಡಲ್ಪಟ್ಟವರು. ಅಷ್ಟೇ ಅಲ್ಲ ತಮ್ಮ ಸುತ್ತ ಮುತ್ತ ಇರುವ ಸಾಮಾನ್ಯ ಜನರನ್ನು ಧೀರರನ್ನಾಗಿಯೂ, ಹುತಾತ್ಮರನಾಗಿಯೂ ಮಾಡುವ ಅತ್ಯಾಶ್ಚರ್ಯಕರವಾದ ಆತ್ಮಶಕ್ತಿ ಅವರಿಗಿದೆ, ನೀವೂ ನಂಬುವಿರಾ ? ಟ್ರಾನ್ಸ್‌ವಾಲ್‌ನಲ್ಲಿ ಈವರೆಗೆ ನಡೆದ ಸತ್ಯಾಗ್ರಹ ಹೋರಾಟದಲ್ಲಿ 2700 ಜನ ಭಾರತೀಯರು ತಮ್ಮ ದೇಶದ ಮರ್ಯಾದೆ ರಕ್ಷಣೆಗಾಗಿ ಗಾಂಧೀಜಿಯ ನೇತೃತ್ವದ ಸೆರೆಮನೆಗೆ ಹೋದರು,,,, ಈ ಹೋರಾಟ ನಿಜವಾಗಿ ಗಾಂಧಿಯಿಂದಲೇ ಬೆಳೆದು ನಿಂತಿದ್ದೆ. ಸ್ವಾರ್ಥವಿಲ್ಲದೆ, ಕಳಂಕವಿಲ್ಲದೆ ಅವರು ಈ ದೊಡ್ಡ ಹೋರಾಟವನ್ನು ಭಾರತಕ್ಕಾಗಿ 20 ವರ್ಷಗಳಿಂದ ನಡೆಸಿದ್ದಾರೆ. ಇಂಡಿಯಾ ಅವರಿಗೆ ಕೃತಜ್ಞತೆಯ ದೊಡ್ಡ ಋಣವನ್ನು ಸಲ್ಲಿಸ –ಬೇಕಾಗಿದೆ. ಈ ಕಾರ್ಯಕ್ಕಾಗಿ ಅವರು ತಮ್ಮನ್ನು, ತಮ್ಮ ಸರ್ವಸ್ವವನ್ನು ಪೂರ್ಣವಾಗಿ ತ್ಯಾಗ ಮಾಡಿದ್ದಾರೆ. ಅವರಿಗೆ ಒಳ್ಳೆ ಲಾಭದಾಯಕವಾದ ವಕೀಲಿ ವೃತ್ತಿ ಇದ್ದಿತು. ಅವರು ವರ್ಷಕ್ಕೆ 5000 ದಿಂದ 6000 ಪೌಂಡ್‌ಗಳನ್ನು ಸಂಪಾದಿಸುತ್ತಿದ್ದರು. ಆದರೆ ಈಗ ಅವರು ಅದನ್ನೆಲ್ಲಾ ಬಿಟ್ಟು ತಿಂಗಳಿಗೆ 3 ಪೌಂಡ್ ಖರ್ಚಿನಲ್ಲಿ ಬೀದಿಯ ಬಿಕಾರಿಯಂತೆ ಜೀವಿಸುತ್ತಿದ್ದಾರೆ. ಅವರ ವಿಷಯದಲ್ಲಿ ಎದ್ದು ಕಾಣುವ ಮತ್ತೊಂದು ಸಂಗತಿ ಎಂದರೆ ಅವರ ಮನಸ್ಸು ಯೂರೋಪಿಯನ್ ಜನರ ವಿಷಯದಲ್ಲಿ ದ್ವೇಷ ಮತ್ತು ಕಟುತ್ವ ರಹಿತವಾಗಿದೆ.


– **ಗೋಪಾಲ ಕೃಷ್ಣ ಗೋಖಲೆ** (1913ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಹೋರಾಟ ನೋಡಿ ಭಾರತಕ್ಕೆ ಹಿಂತಿರುಗಿದ ಮೇಲೆ ನೀಡಿದ ಹೇಳಿಕೆ)

"ಗಾಂಧೀಜಿ ಭಾರತದ ಉತ್ತಮ ಅಂಬಿಗನಾಗಿದ್ದರು.ಇಪ್ಪತ್ತನೆಯ ಶತಮಾನದಲ್ಲಿ ಜಗತ್ತಿಗೆಲ್ಲ ಆತ್ಮಪ್ರಜ್ಞೆಯ ಕಿಡಿಯಾಗಿದ್ದರು". **ರಾಜಮೋಹನಗಾಂಧಿ** (ಗಾಂಧೀಜಿ ಮೊಮ್ಮಗ)

"ಗುನ್ನಾರ್ ಮಿರ್ಡಲ್ (ಸ್ವೀಡನ್ನಿನ ನೋಬೆಲ್ ವಿಜೇತ ಅರ್ಥಶಾಸ್ತ್ರಜ್ಞ 1960 ರಲ್ಲಿ The Challenge of world poverty ಎಂಬ ಪ್ರಸಿದ್ಧ ಗ್ರಂಥದಲ್ಲಿ"

ಆರ್ಥಿಕ ಬೆಳವಣಿಗೆಯಲ್ಲಿ ವ್ಯಕ್ತಿಯೇ ಕೇಂದ್ರಬಿಂಧು. ಭಾರತದ ಮಹಾತ್ಮ ಗಾಂಧಿ ಕಟ್ಟಕಡೆಯುವನಿಗೆ ನ್ಯಾಯ (into this last) ಎಂದು ಏಕಾ ಪ್ರಕಾರವಾಗಿ ಒತ್ತಿಹೇಳುತ್ತಿದ್ದರು. ಸಾಮಾನ್ಯ ಜನ ಅದರಲ್ಲೂ ಜಗತ್ತಿನ ಬಹುಸಂಖ್ಯಾತರಾಗಿರುವ ಗ್ರಾಮ ಜೀವಿಗಳು, ವಿವೇಕಿಗಳೂ. ಕ್ರಿಯಾಶಿಲರೂ ಆಗಿ ತಮ್ಮ ಸಣ್ಣ ಸಣ್ಣ ಸಮಾಜಗಳನ್ನು ಮಾನವೀಯ ಮೌಲ್ಯಗಳನ್ನಾಧರಿಸಿ ಪರಿವರ್ತಿಸಿಕೊಳ್ಳುವುದರಿಂದ ಮಾನವನ ಅಭಿವೃದ್ಧಿ (Human Development) ಹೆಚ್ಚು ಸುಲಭ ಸಾಧ್ಯ.... ಗಾಂಧೀಜಿ ನಮ್ಮ ವಿಶ್ವದ ಶ್ರೇಷ್ಠ ಚಿಂತಕರು, ಪ್ರಯೋಗಶೀಲರು..... ವಿಚಾರಬದ್ಧ ಯೋಜನಾ ಚತುರರು. ಸಮಗ್ರ ದೃಷ್ಟಿಯಿಂದ ಮಾನವ ಯೋಗಕ್ಷೇಮ ನೋಡಿದವರು, ಕೇವಲ ವಾದ ಚತುರರಾಗಿರಲಿಲ್ಲ. ವ್ಯವಸಾಯ ಕೇಂದ್ರಿತ ಬದುಕು, ಜಗತ್ತಿನ ಮುಕ್ಕಾಲು ಪಾಲುಜನರಿಗೆ ಅನಿವಾರ್ಯ. ಅವರೆಲ್ಲರೂ ಪರಿಷ್ಕೃತ ಆಧುನಿಕತೆಯ ಸುಯೋಗ್ಯ ಅನ್ವಯದಿಂದ ಗ್ರಾಮಗಳಲ್ಲಿ ಬದುಕಬೇಕೆಂಬ ಸತ್ಯವನ್ನು ಅರಿತಿದ್ದರು. ಸಮಾನತೆಯ ಸಾಧನೆಗಾಗಿ ಉತ್ಪಾದನಾ ಸಾಧನಗಳಾದ ಭೂಮಿ ಮತ್ತು ಸಂಪತ್ತುಗಳ ನ್ಯಾಯೋಚಿತ ಹಂಚಿಕೆ ಅವರ ಗ್ರಾಮ ರಾಜ್ಯದ ಯೋಜನೆಯಾಗಿತ್ತು. ಈಗ ಆರ್ಥಿಕ ತಜ್ಞರಾದವರು ಯಾವುದನ್ನು ಸರ್ವಾಂಗೀಣ ಯೋಜನೆ (Integrated Planning) ಎನ್ನುವರೋ ಅದು ಮಹಾತ್ಮ ಗಾಂಧಿ ಬೋಧಿಸಿದ ಸ್ವರಾಜ್ಯದ ತಿರುಳು".

— o —



ಇವಾನ್ ಇಲಿಚ್

ಮೆಕ್ಸಿಕೋದಲ್ಲಿ ವಾಸವಾಗಿದ್ದ ಶಿಕ್ಷಣ ತಜ್ಞ

(1979ರಲ್ಲಿ ಗಾಂಧೀಜಿ ಸೇವಾಗ್ರಾಮದಲ್ಲಿ ತಂಗಿದ್ದರು. ತಮ್ಮ "The Message of Gandhi's Hut" ಎಂಬ ಲೇಖನದಲ್ಲಿ)

"ಸರ್ವರೊಡನೆ ಪ್ರೇಮದಿಂದ ಬಾಳುವ ಕಲೆ ಮತ್ತು ಸಮತಾ ಭಾವದ ಜೀವನ ಕ್ರಮದ ಸಂಕೇತವನ್ನು ಈ ಸರಳ ಪರ್ಣಕುಟಿ ಸಾರುತ್ತಿದೆ. ಅದರ ಚೆಲುವು, ಸರಳತೆ, ಅಚ್ಚುಕಟ್ಟುಗಳು ಒಂದು ಜೀವನ ಕ್ರಮದ ಮೌಲ್ಯಗಳ ಪ್ರತೀಕ. ಗಾಂಧಿ ಯಾವುದನ್ನು ಭಾರತೀಯ ಸಂಸ್ಕೃತಿ ಎಂದರೋ ಅದರ ಪ್ರತಿಬಿಂಬವೇ ಅವರ ಕನಸಿನ ಗ್ರಾಮಜೀವನ. ಆರ್ಥಿಕ ಅಭಿವೃದ್ಧಿ ಉತ್ಪಾದನಾ ಯಂತ್ರಗಳ ಬೆಳವಣಿಗೆಯಿಂದಲೇ ಸಾಧಿಸುವುದಿಲ್ಲ. ಆಡಂಬರದ ಜೀವನದಲ್ಲಿ ಆನಂದವಿರದು. ಜಡವಸ್ತು ವ್ಯೂಹಗಳಲ್ಲಿ ಮಾನವ ವ್ಯಕ್ತಿತ್ವವೇ ನಾಶವಾದೀತು. ನಿಸರ್ಗದೊಡನೆ ನಿಕಟ ಬಾಂಧವ್ಯವಾಗಲಿ, ಸಹಜೀವಿಗಳೊಂದಿಗೆ ಪ್ರೇಮ ಪರಿಸರವಾಗಲಿ, ಮಾನವೀಯ ಸಾಂಸ್ಕೃತಿಕ ಪ್ರಜ್ಞೆಯಾಗಲಿ ನಗರೀಕರಣದಿಂದ ವಿಕಾಸವಾಗಲಾರದು."

—o—



ಷ್ಯೂಮಾಚರ್

(ಜರ್ಮನಿಯ ಅರ್ಥಶಾಸ್ತ್ರಜ್ಞ)

(Small is beautiful ಎಂಬ ಗ್ರಂಥದಲ್ಲಿ)

"ಸಣ್ಣ ಸಣ್ಣ ಪಾರಂಪರಿಕ ಸಂಘ ಜೀವನ ಘಟಕಗಳಲ್ಲಿ ಮಾತ್ರವೇ ಮಾನವನು ಮಾನವನಾಗಿ ವ್ಯವಹರಿಸುವುದು ಸಾಧ್ಯ. ಆದ್ದರಿಂದ ವಿಶ್ವವ್ಯಾಪಕವಾಗಿ ಸಣ್ಣ ಸಣ್ಣ ಪ್ರಮಾಣದ ಉತ್ಪಾದನಾ ಮತ್ತು ವಿತರಣಾ ಪದ್ಧತಿಯ ಸಾಮಾಜಿಕ ಘಟಕಗಳಾದ ಗ್ರಾಮ ಕೇಂದ್ರಗಳನ್ನು ಮುಂದಿನ ಪೀಳಿಗೆ ಯೋಚಿಸುವುದು ಅನಿವಾರ್ಯ".....

"ಗಾಂಧೀಜಿ ಹೇಳಿರುವಂತೆ ಅಗಾಧ ಪ್ರಮಾಣದ ಉತ್ಪಾದನೆ ಬಡಜನತೆಗೆ ನೆರವು ನೀಡುವುದಿಲ್ಲ. ಅವರ ಅಭಿಕ್ರಮ ಶಕ್ತಿಗೆ ಚಾಲನೆ

ನೀಡಿ ವ್ಯಕ್ತಿತ್ವವನ್ನು ಪೋಷಿಸುವುದಿಲ್ಲ. ಬೃಹದ್ ವ್ಯಾಪಾರಿ ಸಂಸ್ಥೆಗಳಾದ ತಂತ್ರ ವಿನ್ಯಾಸದೊಡಲಿನಲ್ಲಿ ಹಿಂಸಾಚಾರ, ನಿಸರ್ಗನಾಶ, ಶಕ್ತಿಮೂಲಗಳ ದುಂದು ಬಳಕೆ, ಕ್ಷಿಪ್ರ ಕ್ಷಾಮಡಾಮರುಗಳು, ಮಾನವ ಶೋಷಣೆಗಳಲ್ಲೂ ಹೆಣೆದುಕೊಂಡು ಬರುತ್ತಿವೆ.... ಹಳ್ಳಿಗಳ ಸರಳ ಸಾಧನೆಗಳಿಂದ ಉತ್ಪಾದಿಸಿ ಬೃಹತ್ ಆರ್ಥಿಕ ಸಂಕೋಲೆಗಳಿಂದ ವಿಮೋಚಿತ - ವಾಗುವಂತಹ ವಿಕೇಂದ್ರಿತ ಆಧುನಿಕ ವ್ಯವಸ್ಥೆ ಸಾಧ್ಯ. ಆಗ ಮಾತ್ರ ಗಾಂಧೀಜಿ ಅವರು ಹೇಳಿದ ಗ್ರಾಮ ಸಮಾಜವು ಬಡತನ, ನಿರುದ್ಯೋಗಗಳನ್ನು ನಿವಾರಿಸಲು ಶಕ್ಯವಾದೀತು".

—o—



ಡೆಸ್ಮಂಡ್ ಟುಟು
(ನೊಬೆಲ್ ಪ್ರಶಸ್ತಿ ಪುರಸ್ಕೃತರು)

(1979ರಲ್ಲಿ ಗಾಂಧೀಜಿ ಸೇವಾಗ್ರಾಮದಲ್ಲಿ ತಂಗಿದ್ದರು. ತಮ್ಮ "The Message of Gandhi's Hut" ಎಂಬ ಲೇಖನದಲ್ಲಿ)

"ಗಾಂಧೀಜಿ ಅವರಲ್ಲಿ ಮಾಂತ್ರಿಕ ಶಕ್ತಿ, ಆಕರ್ಷಕ ಶಕ್ತಿ ಅಡಗಿದೆ. ಗಾಂಧೀಜಿ ಅವರನ್ನು ಕಂಡಾಗ ಆತನಲ್ಲಿ ಮಣ್ಣಿನ ಹಸಿಮುದ್ದೆಯನ್ನು ಉಪಯೋಗಿಸಿ ಅತಿರಥವನ್ನು ಮೀರಿಸುವಂತಹ, ವೀರರನ್ನು ನಿರ್ಮಾಣ ಮಾಡಬಲ್ಲ ಶಕ್ತಿ ಅಡಗಿದೆ".

"ಕ್ರೂರವು ಸಿನಿಕವೂ ಆದ ಸಂಸ್ಕೃತಿಗಳಲ್ಲಿ ನಾವು ಪ್ರಶಂಸಿಸುವುದು ಬಲಿಷ್ಠನನ್ನಲ್ಲ, ದುಷ್ಟನನ್ನೂ ಅಲ್ಲ, ಗೆದ್ದವನನ್ನೂ ಅಲ್ಲ. ನಾವು ಸಾರ್ವತ್ರಿಕವಾಗಿ ಹೆಚ್ಚು ಗೌರವದಿಂದ ಕಾಣುವುದು ಮಹಾತ್ಮ ಗಾಂಧಿಯನ್ನು, ಮಾರ್ಟಿನ್ ಲೂಥರ್‌ಕಿಂಗ್". ಮದರ್‌ಥೆರೇಸಾ ಅವರನ್ನು. ಏಕೆಂದರೆ ಅವರು ಒಳ್ಳೆಯವರು. ನಮ್ಮಲ್ಲಿ ಒಳ್ಳೆಯ ತನವನ್ನು ಗ್ರಹಿಸಿ ಕೊಡುವ ಗ್ರಾಹಕಾಂಗ ಅವರಲ್ಲಿದೆ. ಏಕೆಂದರೆ ನಾವು ಸೃಷ್ಟಿಯಾಗಿರುವುದೇ ಒಳಿತಿಗಾಗಿ, ಪ್ರೀತಿಗಾಗಿ, ಸಭ್ಯತೆಗಾಗಿ, ಹಂಚಿಕೊಳ್ಳುವುದಕ್ಕಾಗಿ, ನಾವು ಹೆಚ್ಚು ಕಡಿಮೆ ಅಂತಿಮ ಅಸಂಗತರು. ಅನಂತಕ್ಕೆ ಸೃಷ್ಟಿಯಾದವರು."

(2005ರಲ್ಲಿ ಭಾರತೀಯ ವಿದ್ಯಾಮಂದಿರದಲ್ಲಿ "ಮನುಕುಲಕ್ಕೆ ಭವಿಷ್ಯ ಇದೆಯಾ?" ಎಂಬ ವಿಷಯದ ಬಗ್ಗೆ ಮಾಡಿದ ಭಾಷಣದಲ್ಲಿ)




ಅರ್ನಾಲ್ಡ್ ಟಾಯ್ನ್‌ಬಿ

ಇಂಗ್ಲೆಂಡಿನ ಇತಿಹಾಸದ ವಿದ್ವಾಂಸರು

"ರಾಜಕಾರಣದ ಕೊಳಚೆಯೊಳಗೆ ಬದುಕಲು ಸಿದ್ಧನಿದ್ದ ಏಕೈಕ ಪ್ರವಾದಿ ಮಹಾತ್ಮಗಾಂಧಿ".

"ಈಗ ಮಾನವ ಇತಿಹಾಸದಲ್ಲಿ ವಿಧ್ವಂಸಕ ಪ್ರವೃತ್ತಿಗಳನ್ನು ಸಂಪೂರ್ಣವಾಗಿ ತ್ಯಜಿಸಲು ಕಾಲ ಸನ್ನಿಹಿತವಾಗಿದೆ. ಕೇವಲ ಯುದ್ಧವೆಂಬ ಸಂಸ್ಥಾಬದ್ಧ ವ್ಯವಸ್ಥೆಯಲ್ಲಿ ಮಾತ್ರವೇ ಅಲ್ಲ, ಮಾನವ ಬಾಂಧವ್ಯಗಳ ಎಲ್ಲ ವಲಯಗಳಲ್ಲೂ ಅದು ಅತ್ಯಗತ್ಯವೆನಿಸಿದೆ. ಈ ನಿಟ್ಟಿನಲ್ಲಿ ಮಹಾತ್ಮ ಗಾಂಧಿಯವರ ಪ್ರಯೋಗ ಮತ್ತು ಸಾಧನೆಗಳು ಜಗತ್ತಿಗೆ ದಾರಿದೀಪವಾಗಿವೆ".

—o—



ಆಚಾರ್ಯ ವಿನೋಬಾಭಾವೆ

'ಲೋಕೋತ್ತರ ಮಹಾಪುರುಷರ ಮನಸ್ಸನ್ನು ಚೆನ್ನಾಗಿ ಬಲ್ಲವರೆಂದು ಹೇಳಿಕೊಳ್ಳುವವರು ಯಾರು? ಎಂದು ಖ್ಯಾತ ಕವಿ ಭವಭೂತಿ ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನು ಗಾಂಧೀಜಿ ಅವರಿಗೆ ಅನ್ವಯಿಸಬಹುದಾಗಿದೆ. ಗಾಂಧೀಜಿ ಅವರೊಬ್ಬ ಮಹಾ ಪುರುಷರು. ಆದಾಗ್ಯೂ ಅವರು ತಮ್ಮ ಮನೋರಂಗವನ್ನು ತಮ್ಮ ಅಂತರಂಗವನ್ನು ಯಾವತ್ತು ಮುಚ್ಚಿಟ್ಟಿರಲಿಲ್ಲ. ಇಡೀ ಜಗತ್ತಿನ ಮುಂದೆ ಮನಸ್ಸನ್ನು ತೆರೆದಿಟ್ಟಿದ್ದರು. ಅವರ ಪಾಲಿಗೆ ರಹಸ್ಯವೆಂಬುದೇ ಇರಲಿಲ್ಲ."

(ಆರ್.ಕೆ. ಪ್ರಭು ಮತ್ತು ಯು.ಆರ್.ರಾವ್ ಅವರ "ಮಹಾತ್ಮಗಾಂಧಿಜಿ ಅವರ ಮನೋರಂಗ" ಪುಸ್ತಕದ ಮುನ್ನುಡಿಯಲ್ಲಿ ಬರೆದ ವಿನೋಬಾಜಿ ಅವರ ನುಡಿಗಳು)

"ನನಗೆ ಭಗವದ್ಗೀತೆಯನ್ನು ಓದುವುದಕ್ಕಿಂತ ಮಿಗಿಲಾದುದು ಯಾವುದು ಇಲ್ಲ. ಗೀತೆಯ ಸಂದೇಶಗಳನ್ನು ಅಳವಡಿಸಿಕೊಂಡು ಬದುಕುತ್ತಿರುವ ಮಹಾತ್ಮ ಗಾಂಧಿ ನನ್ನ ಗುರು ಹಾಗೂ

ಮಾರ್ಗದರ್ಶಕರು. ಅವರು ಸಬರಮತಿ ಆಶ್ರಮದಲ್ಲಿ ನಡೆದಾಡುವ ದೇವರಂತೆ ಬದುಕಿದ್ದಾರೆ."

"ಗಾಂಧಿ ಮತ್ತು ಗಾಂಧಿ ಮಾರ್ಗ ಇವೆರಡು ನನ್ನ ಜೀವನದ ಧ್ಯೇಯ"

"ನಾಳಿನ ಯುಗ ವೇದಾಂತ ಮತ್ತು ವಿಜ್ಞಾನದ್ದು. ಆ ಯುಗದ ಮೊದಲ ದಾರ್ಶನಿಕ ಗಾಂಧೀಜಿ.

"ನನಗೆ ಬಾಲ್ಯದಿಂದಲೂ ಹಿಮಾಲಯ ಮತ್ತು ಸಂತರು ಹಾಗೂ ಬಂಗಾಳ ಮತ್ತು ಅಲ್ಲಿನ ಸಮಾಜ ಸುಧಾರಕರನ್ನು ಕಾಣುವ ಹಂಬಲವಿತ್ತು. ಆದರೆ ಗಾಂಧೀಜಿ ಅವರ ಭೇಟಿಯ ನಂತರ ಎಲ್ಲರನ್ನೂ ನಾನು ಅವರಲ್ಲಿ ಕಂಡೆ."

"ನಾನು ಕಾಶಿಯಲ್ಲಿದ್ದಾಗ ಹಿಮಾಲಯಕ್ಕೆ ಹೊರಡಬೇಕು ಎಂಬ ಮುಖ್ಯ ಅಪೇಕ್ಷೆಯನ್ನು ಹೊಂದಿದ್ದೆ. ಇದರ ಜೊತೆಗೆ ಬಂಗಾಳಕ್ಕೆ ಹೋಗಿ ಜಿಡಬೇಕೆಂಬ ಆಸೆಯೂ ಪ್ರಬಲವಾಗಿತ್ತು. ಆದರೆ ವಿಧಿ ನನ್ನನ್ನು ಗಾಂಧೀಜಿಯವರ ಬಳಿ ಕರೆದೊಯ್ದಿತು. ಅಲ್ಲಿ ನನಗೆ ಹಿಮಾಲಯದ ಶಾಂತಿಯೂ, ಬಂಗಾಳದ ಉತ್ಕಟ ಕ್ರಾಂತಿ ಭಾವವೂ ಕಂಡು ಬಂದವು. ನಾನು ಧನ್ಯ ಎಂದು ಕೊಂಡೆ."

—o—



ಸಿ.ಎಫ್. ಆಂಡ್ರೂಸ್


ಇಂಗ್ಲೆಂಡಿನ ಕ್ರೈಸ್ತ ಪಾದ್ರಿ

"ಗಾಂಧಿ ದೈಹಿಕವಾಗಿ ಚಿಕ್ಕ ಪ್ರಮಾಣದವರು. ಆದರೆ ಮಾತು ಗಂಭೀರ, ತೀಕ್ಷ್ಣ. ಅವರು ಸಹನೆಯ ಪ್ರತಿಮೂರ್ತಿ. ಯಾವ ಕಾಠಿಣ್ಯವೂ ಅವರ ಬಳಿ ಸುಳಿಯುವುದಿಲ್ಲ. ಅವರದು ಹಸುಗೂಸಿನ ಸ್ವಭಾವ. ಅವರ ಆತ್ಮಸಂಯಮ ಪರಾಕಾಷ್ಠೆಯನ್ನು ಹೊಂದಿದೆ. ಅವರದು ಕಠಿಣವಾದ ಆಶ್ರಮ ಜೀವನ, ಕಾರಣ ಅತಿ ಸಂಕಟ ಸಹನೆಗೆ ಅದೊಂದು ಶಿಕ್ಷಣ ಎನ್ನುತ್ತಾರೆ. ಸೆರೆಮನೆವಾಸ ಅವರಿಗೆ ಬಹಳ ಸುಲಭ. ಬಂಧನದಲ್ಲಿದ್ದಾಗಲೆಲ್ಲಾ ಆತ್ಮಶುದ್ಧಿ, ಪ್ರಾರ್ಥನೆ, ಕಠೋರ ಶಿಸ್ತು

ಪಾಲಿಸುತ್ತಾರೆ. ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅದೊಂದು ಅಮೋಘ ಶಕ್ತಿಯಾಗಿದೆ.

(-ಸಿ.ಎಫ್. ಆಂಡ್ರೂಸ್ 1923 ರಿಂದ 20 ವರ್ಷಗಳು ಭಾರತದ ನಿವಾಸಿಯಾಗಿದ್ದವರು. ಗಾಂಧೀಜಿ ಅವರ ಪರಮಮಿತ್ರ. ಇಂಗ್ಲೆಂಡಿನ ಕ್ರೈಸ್ತ ಪಾದ್ರಿ, ಭಾರತದ ವಿಮೋಚನೆಗಾಗಿ ಶ್ರಮಿಸಿದವರು)

—o—




ಸರ್ದಾರ್ ವಲ್ಲಭಬಾಯಿ ಪಟೇಲ್

ಭಾರತ ಸರ್ಕಾರದ ಮೊದಲ ಗೃಹಮಂತ್ರಿ

"ದೇಶದ ರಾಜಕೀಯ ಜೀವನದಲ್ಲಿ ಅವರು ಮಾಡಿದ ಕ್ರಾಂತಿಯೂ ನಿಜವಾದ ಅಂತಃ ಸ್ವರೂಪವು ಈ ತಲೆಮಾರಿನ ಜನರಿಗೆ ಬಹಳ ಗೊತ್ತಿಲ್ಲವೆಂದೇ ಹೇಳಬಹುದು. ಈ ಶತಮಾನದ ಪ್ರಾರಂಭದಲ್ಲಿ ಬಾಳುತ್ತಿದ್ದ ವ್ಯಕ್ತಿಗಳಿಗೆ ಮಾತ್ರ ಅದರ ಸಂಪೂರ್ಣ ಪರಿಚಯವಿದೆ."

"ಗಾಂಧೀಜಿ ನಮ್ಮೊಂದಿಗೆ ಯಾವಾಗಲೂ ಇದ್ದೇ ಇರುತ್ತಾರೆ. ಯಾಕೆಂದರೆ ಅವರ ಬೋಧನೆಗಳು ಹಾಗೂ ಆದರ್ಶಗಳು ನಮ್ಮ ಮುಂದೆ ಇವೆ. ಅವರ ದೇಹ ಬೂದಿಯಾದರೂ ಅವರ ಆತ್ಮ ಎಂದೆಂದಿಗೂ ನಮ್ಮೊಂದಿಗೆ ಇರುತ್ತದೆ ಆತ್ಮ ಅವಿನಾಶಿ.

—o—



ರವೀಂದ್ರನಾಥ್ ಠಾಗೂರ್

ಭಾರತದ ಮೊದಲ ನೊಬೆಲ್ ಪ್ರಶಸ್ತಿ ಪುರಸ್ಕೃತರು

"ದೀನ ನಿರ್ಗತಿಕರ ಗುಡಿಸಲುಗಳ ಮುಂದೆ ಅವರು ತಲೆಬಾಗಿ ನಿಂತರು. ಅವರದೇ ಉಡುಪು ತೊಟ್ಟರು. ಅವರ ಭಾಷೆಯಲ್ಲಿಯೇ ಮಾತನಾಡಿ ದರು. ಅವರು ಕೇವಲ ಗ್ರಂಥಗಳ ಅವತರಣವಾಗಿರಲಿಲ್ಲ. ಸತ್ಯದ ಜೀವಂತ ಪ್ರತೀಕವಾಗಿದ್ದರು. ಇದೆ

ಅವರನ್ನು ಮಹಾತ್ಮ ಪದವಿಗೇರಿಸಿದ್ದು. ಭಾರತದ ಜನಸ್ತೋಮ ಅವರಿಗಿಟ್ಟ ಹೆಸರು ಇದು. ಎಲ್ಲ ಭಾರತೀಯರನ್ನ ಅವರು ತಮ್ಮ ರಕ್ತ ಸಂಬಂಧಿಗಳೆಂದು ತಿಳಿದಿದ್ದರು. ಹೀಗೆ ಭಾವಿಸುವವರೆಷ್ಟು ಜನರಿದ್ದಾರೆ ನಮ್ಮಲ್ಲಿ."

"ಮಹಾತ್ಮ ಗಾಂಧಿ ತಮ್ಮ ನಿರ್ವಾಜ್ಯ ಪ್ರೇಮದಿಂದ ಭಾರತದ ಹೃದಯವನ್ನು ಗೆದ್ದು ಕೊಂಡಿದ್ದಾರೆ. ಅದು ಅವರ ಸಾರ್ವಭೌಮ ಶಕ್ತಿಯಾಗಿ ನಿಂತಿದೆ. ಸತ್ಯದ ಅಪರಿಮಿತ ಸಾಮರ್ಥ್ಯವನ್ನು ಅವರು ದರ್ಶನ ಮಾಡಿಸಿದ್ದಾರೆ. ಅದಕ್ಕಾಗಿ ಅವರಿಗೆ ನಾವು ಋಣಿಗಳು. ಕಾಂಗ್ರೆಸ್ಸಿನಂತಹ ಸಂಸ್ಥೆಗಳನ್ನು ಕಟ್ಟ ಬಹುದು, ವಿಸರ್ಜಿಸಬಹುದು. ಆದರೆ ರಾಷ್ಟ್ರವನ್ನು ಸತ್ಯ, ಪ್ರೇಮಗಳ ಅಖಂಡ ಪ್ರಜ್ಞೆಗೆ ಎಚ್ಚರಿಸುವ ಕಾರ್ಯ ಕುಶಲ ಕರ್ಮಿಗೂ ಸಾಧ್ಯವಾಗದು. ಈ ಮಹಾಸ್ತ್ರವನ್ನು ಪಡೆದಿರುವ ಆ ಮಹಾನಾಯಕನಿಗೆ ನಮೋ ಎನ್ನುತ್ತೇನೆ."

"ಮಹಾತ್ಮರ ನೈತಿಕ ನಿಷ್ಠೆ ಅತ್ಯಂತ ಅಮೋಘವಾದುದು. ಅವರು ಭಗವಂತ ಅನುಗ್ರಹಿಸಿದ ದಿವ್ಯಶಕ್ತಿ. ಆ ಶಕ್ತಿ ದೇಶಕ್ಕೆ ಬಲ ತಂದು ಕೊಡಲಿ."


"ಗಾಂಧೀಜಿ ಅವರ ಅನುಪಮ ಶಕ್ತಿ ನಿಗೂಢವಾದುದು. ಅದೇನೋ ಒಂದು ಪ್ರಕಾಶ ಅವರ ಮುಖದಲ್ಲಿ. ಅದೇನೋ ಒಂದು ಪ್ರಭಾವ ಅವರ ಆತ್ಮದಲ್ಲಿ. ಅದರ ವೇಗದಿಂದ ಸದಾ ಮೇಳೈಸಿ ಚಿಮ್ಮುವ ಆ ನಸು ನಗುವಿನ ತಾತ್ಪರ್ಯವೇನು ? ಇವೆಲ್ಲವೂ ಅವರ ತ್ಯಾಗದ ಪ್ರತ್ಯಕ್ಷ ಫಲ. ಅವರ ಜೀವನವು ತ್ಯಾಗದ ಪ್ರತ್ಯಕ್ಷ ಮೂರ್ತಿ."

—o—

"ಮಹಾತ್ಮ ಗಾಂಧಿಯವರು ಬುದ್ಧನಂತೆ, ಕ್ರಿಸ್ತನಂತೆ ಎಂದೆಂದಿಗೂ ಜೀವಿಸಿರುತ್ತಾರೆ. ಬುದ್ಧ, ಕ್ರಿಸ್ತರು ಪ್ರೇಮದ ಧರ್ಮವನ್ನು ಬೋಧಿಸಿ-ದರು. ಆದರೆ ಬಾಪು ಪ್ರೇಮದ ಧರ್ಮ ಬರಿಯ ಸನ್ಯಾಸಿಗಳಿಗೆ ಮಾತ್ರವಲ್ಲ ಇದು ಸಮಾಜದ ನಿತ್ಯಧರ್ಮ, ಸತ್ಯಕರ್ಮ ಎಂಬುದನ್ನು ಆಚರಿಸಿ ತೋರಿಸಿದರು".

ಡಾ॥ ಸುಶೀಲನಯ್ಯರ್

—o—



ಪಂಡಿತ್ ಜವಹರಲಾಲ್ ನೆಹರು

ಭಾರತದ ಪ್ರಥಮ ಪ್ರಧಾನಮಂತ್ರಿ

"ಗಾಂಧೀಜಿ ಕುಳಿತಲ್ಲಿ ದೇವ ಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು."


"ಗಾಂಧೀಜಿ ಒಬ್ಬ ಪ್ರಚಂಡ ವ್ಯಕ್ತಿ. ತಮ್ಮ ಸದ್ಭಾವನ, ಬುದ್ಧಿ ಮತ್ತೆ, ದೂರದೃಷ್ಟಿ, ದಯಾಪರತೆ ಮತ್ತು ಮನಸ್ಸಿನ ಎಲ್ಲ ಭಾವನೆ ಕಾಮವಾಸನೆಗಳನ್ನು ಹತ್ತಿಕ್ಕಿದ ಒಂದು ಆಧ್ಯಾತ್ಮಿಕ ಶಕ್ತಿ.

"ಗಾಂಧೀಜಿ ಅವರ ಜೀವನದ ಹಂತ ನೋಡಿದಾಗ ಸಾಮಾನ್ಯರಲ್ಲಿ ಸಾಮಾನ್ಯರಾಗಿ ತಪ್ಪು ಮಾಡುತ್ತಲೇ ಬದುಕು ರೂಪಿಸಿಕೊಂಡವರು."

"ನಿಶ್ಚೇತನ ದೇಹಕ್ಕೆ ಜೀವದುಸಿರು ಕೊಟ್ಟು ಅಂಗಾಂಗಗಳಿಗೆ ಚಲನಶಕ್ತಿ ಕೊಡುವ ಶುಭ್ರಗಾಳಿಯಂತೆ, ಕತ್ತಲೆ ಗಡಿಯೊಳಗೆ ತೂರಿ ಬಂದು ತನ್ನ ಕಣ್ಣು ಪೂರೆ ತೆಗೆದ ಬೆಳಕಿನ ಕಿರಣದಂತೆ ಅನೇಕ ವಸ್ತುಗಳನ್ನುರಿಸಿ ಜನಮನವನ್ನು ಅಲ್ಲೋಲ ಕಲ್ಲೋಲ ಮಾಡಿದ ಬಿರುಗಾಳಿಯಂತೆ ಗಾಂಧೀಜಿ ಬಂದರು. ಅವರು ಮೇಲಿನಿಂದ ಕೆಳಗಿಳಿದು ಬಂದವರಲ್ಲ. ಭಾರತದ ಜನಕೋಟಿಯ ಮಡಿಲಿನಿಂದ ಬಂದು ಅವರ ಭಾಷೆಯಲ್ಲೇ ಮಾತನಾಡಿ ಸದಾ ಅವರು ಮತ್ತು ಅವರ ದಾರುಣ ಸ್ಥಿತಿಯ ಕಡೆಗೆ ಬೆರಳು ತೋರಿಸಿ ದೃಷ್ಟಿ ಇಟ್ಟವರು.

"ನಮ್ಮ ಹೃದಯವನ್ನೇ ಹೊಡೆಯುವಂತಹ ಈ ನಿರಾಶಾದಾಯಕ ಸ್ಥಿತಿಯಲ್ಲಿ ಒಂದು ಭರವಸೆ ಎಂದರೆ ಗಾಂಧಿ ಅಂತಹ ವ್ಯಕ್ತಿಯನ್ನು ಹುಟ್ಟು ಹಾಕಿದ ಶಕ್ತಿಶಾಲಿ ಭೂಮಿ ನಮ್ಮದು. ಇನ್ನೊಬ್ಬ ಗಾಂಧೀ ಇನ್ನೂ ಒಂದು ಸಾವಿರ ವರ್ಷಗಳ ನಂತರ ಹುಟ್ಟುವುದು. ಸದ್ಯಕ್ಕೆ ಗಾಂಧಿಯವರು ತಮ್ಮ 70 ವರ್ಷಗಳ ಅನುಭವದಿಂದ ಕೊಟ್ಟಿರುವ ಮಾರ್ಗದರ್ಶನದಿಂದ ನಮ್ಮ ಬದುಕನ್ನು ರೂಪಿಸಿಕೊಳ್ಳೋಣ. ಅವರು ನಮ್ಮನ್ನು ಹೊಸ ಗುರಿಯುತ್ತ ಕೊಂಡೊಯ್ಯುತ್ತಾರೆಯೇ ಹೊರತು ಭ್ರಮಾ ಲೋಕದ ಕಡೆಗಲ್ಲ."

"ಗಾಂಧೀಜಿ ಈ ಮಣ್ಣಿನ ಮನುಷ್ಯನಲ್ಲ, ಆತ ತುಂಬಾ ಅಪರೂಪದ ಕಮ್ಮಟದಲ್ಲಿ ವಿಶೇಷ ವಸ್ತುವಿನಿಂದ ಎರಕಗೊಂಡ ವ್ಯಕ್ತಿ".



ಡಾ|| ಎಸ್. ರಾಧಾಕೃಷ್ಣನ್
ಭಾರತದ ಎರಡನೆ ರಾಷ್ಟ್ರಪತಿ

"ಗಾಂಧೀಜಿ ಅವರ ಹಿರಿಮೆಗಳಿಗೆ ಕಾರಣ ಅವರ ಪವಿತ್ರಮಯ ಜೀವನವೇ ಹೊರತು, ಅವರ ಪೌರುಷದಾಯಕ ಹೋರಾಟವಲ್ಲ."

"ಆತ್ಮದ ವಿಭೂತಿ ಹಾಗೂ ದರ್ಶನದ ದೃಷ್ಟಿಯಿಂದ ಅಳೆದಲ್ಲಿ ನೂರಾ ನಲವತ್ತು ಪೌಂಡ್ ತೂಕದ ಈ ನರಪೇತಲ ಮಾನವರಲ್ಲಿಯೇ ಅತ್ಯಂತ ಪ್ರಚಂಡ ವ್ಯಕ್ತಿ. ತಮ್ಮದೇ ಆದ ರೀತಿಯಲ್ಲಿ ತಮ್ಮ ದೇಶ ಕಾಲಗಳಲ್ಲಿ ಹಿರಿಯರೂ ಆದ ಅತ್ಯಂತ ಪ್ರಮುಖ ಪ್ರಸಿದ್ಧ ವ್ಯಕ್ತಿಗಳು ಈತನ ಪಕ್ಕದಲ್ಲಿ ನಿಂತಾಗ ಕಿರಿಯರೂ, ನಗಣ್ಯರೂ ಆಗಿ ಪರಿಣಮಿಸುತ್ತಾರೆ."


"ಎಲ್ಲಕ್ಕೂ ಮಿಗಿಲಾಗಿ ಅವರು ಧರ್ಮದ ಅರ್ಥ ಹಾಗೂ ಮೌಲ್ಯದ ಬಗ್ಗೆ ನಮ್ಮ ಪ್ರಜ್ಞೆಯನ್ನು ಪುನರುಜ್ಜೀವನಗೊಳಿಸಿದವರು ಹಾಗೂ ಅದನ್ನು ಹೊಸತು ಪಡಿಸಿದವರು. ಗಾಂಧೀಜಿ ಅವರಲ್ಲಿ ಸರ್ವಗ್ರಾಹ್ಯ ಬುದ್ಧಿ ಶಕ್ತಿಯಾಗಲಿ ಅಥವಾ ಹೊಸದೊಂದು ದರ್ಶನ ಅಥವಾ ಹೊಸದೊಂದು ಧರ್ಮದ ರಚನೆಗೆ ಅಗತ್ಯವಾದಂತಹ ಭಾವನಾ ಸಂಪತ್ತಾಗಲಿ ಇರದಿದ್ದಾಗ್ಯೂ ಅವರ ನೈತಿಕ ಶಕ್ತಿಯು ಪ್ರೇರಣೆ ಹಾಗೂ ಅದರ ಪರಿಶುದ್ಧತೆ ಇವು ಸ್ಪಷ್ಟವಾಗಿಯೂ ಅವರಲ್ಲಿದ್ದ ಆಳವಾದ ಧಾರ್ಮಿಕ ಮನೋಭಾವಗಳಿಂದ ಉತ್ಪತ್ತಿಯಾದವು."

—o—

"ಬಾಪು ಯಾವ ಧ್ಯೇಯಕ್ಕಾಗಿ ದುಡಿದರೋ ಆ ಸಾಧನೆಗೆ ನನ್ನನ್ನು ಮೀಸಲಾಗಿಡುತ್ತೇನೆ".

– **ವಿಜಯಲಕ್ಷ್ಮಿ ಪಂಡಿತ್**

—o—



ಜಾರ್ಜ್ ಬರ್ನಾರ್ಡ್ ಷಾ

"ನಮ್ಮಂತೆ ಮಾನವನಾಗಿ ಜನಿಸಿ, ನಮ್ಮಂತೆ ಅನ್ನ, ಜಲ, ವಾಯು ಸೇವಿಸಿ ನಮ್ಮಂತೆ ಈ ನೆಲದ ಮೇಲೆ ನಡೆದ ಈ ವ್ಯಕ್ತಿ ಮಾನವನೇ"?

"ಒಳ್ಳೆಯತನ ಎಷ್ಟೊಂದು ಅಪಾಯಕಾರಿ"
(ಗಾಂಧೀಜಿ ನಿಧನರಾದಾಗ ವಿಷಾದದಿಂದ ಆಡಿದ ಮಾತು)

"ಈ ಅಮಾನುಷ ದುರಂತ ನನ್ನನ್ನು ಸ್ಥಂಭಿತಗೊಳಿಸಿದೆ".

– ಚರ್ಚಿಲ್ (ಬ್ರಿಟಿಷ್ ಮಾಜಿ ಪ್ರಧಾನಿ)

—o—



ಪ್ಯಾರೇಲಾಲ್

(ಗಾಂಧೀಜಿ ಕಾರ್ಯದರ್ಶಿ ಹಾಗೂ ಸಾಹಿತ್ಯದ ಸಹಾಯಕ)

"ಗಾಂಧೀಜಿಯವರ ಪ್ರಖರತೆ, ಕಗ್ಗಲಿನಂಥ ಶಕ್ತಿ ಅವರ ಜೊತೆಗೂಡಿದ ಅವರ ಅಸಾಧಾರಣ ಶಾಂತ ಮನಸ್ಥಿತಿ, ಅವರ ಧ್ವನಿಯಲ್ಲಿರುವ ಯಾವುದೋ ಒಂದು ರೀತಿಯ ಕಾರ್ಯಪಟುತ್ವ ನನ್ನನ್ನು ಆಕರ್ಷಸಿದವು."

"ನಾನು ಗಾಂಧೀಜಿಯವರನ್ನು ನೋಡುವ ರೀತಿ ಶಿಷ್ಯನೊಬ್ಬ ಸಂತನನ್ನು ನೋಡುವ ರೀತಿಗಿಂತ ಬೇರೆ. ಆತ ಒಬ್ಬ ಪ್ರವಾದಿ, ಸಂದೇಶ ದೂತ, ಇದು ನಮ್ಮಲ್ಲಿ ಮೂಡಿಸಿರುವ ಚಿತ್ರ ಕೂಡ".

"ಅವರು ಅತ್ಯಂತ ಅಧಿಕಾರಯುತವಾಗಿ ಮಾತನಾಡುತ್ತಾರೆ. ಅಲ್ಲಿ ಅಸೀಮವಾದ ಜವಾಬ್ದಾರಿ ತುಂಬಿರುತ್ತದೆ. ಆತನಲ್ಲಿ ಪವಾಡ ಸದೃಶವಾದ ಏನೋ ಒಂದು ಶಕ್ತಿ ಇದೆ. "ಮಾನವತಾ ವಾದಿಯಾದ ಮಹಾತ್ಮ ಗಾಂಧೀಜಿ 20ನೆಯ ಶತಮಾನದ ಮಹಾನ್ ದಾರ್ಶನಿಕ. ಕೇವಲ ಭಾರತದಲ್ಲಿ ಮಾತ್ರವಲ್ಲದೆ ಇಡೀ ವಿಶ್ವದ ಗೌರವಕ್ಕೆ ಪಾತ್ರರಾದವರು."

– ಸ್ಟೇನಿ ಜೋನ್ಸ್

—o—



ಮಾರ್ಗರೇಟ್ ಬರ್ಕ್‌ವೈಟ್

ಗಾಂಧೀಜಿ ಅವರೊಡನೆ ಕೊನೆಯ ಸಂದರ್ಶನ ನಡೆಸಿದ ಅಮೆರಿಕಾದ ಪತ್ರಕರ್ತೆ

"ಈ ಮನುಷ್ಯ ಸೊಂಟಕ್ಕೆ ತುಂಡು ಪಂಚೆ ಸುತ್ತಿದ್ದ. ಎತ್ತಿನಗಾಡಿ ಸಂಸ್ಕೃತಿಯ ಬಗ್ಗೆ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಪರಿಹಾರಗಳ ಬಗ್ಗೆ ಚಿತ್ರ ವಿಚಿತ್ರವಾದ ವಿಚಾರಗಳನ್ನು ತಿಳಿಸುವ ಒಬ್ಬ ವಿಚಿತ್ರ ಆಸಾಮಿಯಾಗಿರದೆ ಒಬ್ಬ ಮಹಾಪುರುಷನಾಗಿ ಕಾಣತೊಡಗಿದ್ದರು."

"ಈ ಸಮಾಜವನ್ನು ಪುನರ್ ರಚಿಸುವುದು ಗಾಂಧೀಜಿ ಅವರ ಗುರಿಯಾಗಿರಲಿಲ್ಲ. ಪ್ರತಿಯೊಂದು ಮಾನವ ಹೃದಯವನ್ನು ಪರಿವರ್ತಿಸುವುದು ಅವರ ಗುರಿಯಾಗಿತ್ತು. ಪ್ರತಿಯೊಬ್ಬ ಮನುಷ್ಯನ ಅಂತರಂಗದಲ್ಲಿರುವ ಒಳ್ಳೆಯತನ ಈಚೆ ಬರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು."

"ಗಾಂಧೀಜಿ ಸಮ್ಮುಖದಲ್ಲಿದ್ದಾಗ ಯಾರೊ ಒಬ್ಬ ಅಸಾಧಾರಣ ಪುರುಷನ ಎದುರಿಗಿರುವಂತೆ ನನಗೆ ಅನಿಸುತ್ತಿತ್ತು. ಧರ್ಮ ಸಹಿಷ್ಣುತೆ ಮತ್ತು ಏಕತೆಗಾಗಿ ಅವರು ಮಾಡಿದ ಬಲಿದಾನ ಭಾರತಕ್ಕೆ ಒಂದು ತಿರುವು ತರಬಹುದು. ಗಾಂಧೀಜಿ ಬೆಳಕು ತೋರಿಸುವುದಕ್ಕಾಗಿ ತಮ್ಮ ಜೀವನವನ್ನೇ ಅರ್ಪಣೆ ಮಾಡಿದ್ದರು.

—o—

"ಗಾಂಧೀಜಿಯವರು ವಿಶ್ವಾದ ಮಹಾತ್ಮರು. ಅವರ ನಂತರವೂ ಅವರ ಧ್ಯೇಯ ಧೋರಣೆಗಳು ಈ ಜಗತ್ತಿನಲ್ಲಿ ಆಚಂದ್ರಾರ್ಕವಾಗಿ ಉಳಿಯುವುವು.

– **ಜಯಪ್ರಕಾಶ್ ನಾರಾಯಣ್**



ಡಾ. ರಾಮಮನೋಹರ ಲೋಹಿಯಾ

"ಹೆಣ್ಣು ಮತ್ತು ದೇವರು ನನ್ನ ಬದುಕಿನ ಎರಡು ಮುಖ್ಯ ಕಾಳಜಿಗಳಾಗಿದ್ದವು. ನನಗೆ ಹೆಣ್ಣು ಸಿಗಲಿಲ್ಲ, ದೇವರು ಕಾಣಲಿಲ್ಲ. ಆದರೆ ಹೆಣ್ಣು ಮತ್ತು ದೇವರು ಈ ಇಬ್ಬರ ಸೆಳಕುಗಳ ಸಂಗಮವನ್ನು ನಾನು ಮಹಾತ್ಮಗಾಂಧಿ ಅವರಲ್ಲಿ ಕಂಡೆ."

"ಗಾಂಧೀಜಿ ವಿಜ್ಞಾನ ಯುಗದ ಮಹಾಪ್ರಜ್ಞ"

– ಡಾ|| ಸಿ. ಸುಬ್ರಹ್ಮಣ್ಯಂ (ಭಾರತ ಸರ್ಕಾರದ ಮಾಜಿ ಸಚಿವರು)

—o—

ಅಂತರಾಷ್ಟ್ರೀಯ ಸಮುದಾಯಕ್ಕೆ ವಿಶ್ವದ ೫೩ ಜನ ನೊಬೆಲ್ ಪ್ರಶಸ್ತಿ ವಿಜೇತರು ದಿನಾಂಕ ೨೪-೦೬-೧೯೮೧ ರಂದು ಕೆಳಕಂಡಂತೆ ಮನವಿ ಮಾಡಿದ್ದಾರೆ.

"ಇಂದಿನ ರಾಜನೀತಿ ಮತ್ತು ಆರ್ಥಿಕ ನೀತಿ ಕೋಟ್ಯಾಂತರ ಜನರ ಹಸಿವಿನಿಂದ ಮರಣ ಹೊಂದಲು ಹೊಣೆಯಾಗಿದೆ ಮತ್ತು ಲಕ್ಷಾಂತರ ಜನರನ್ನು ತುಳಿಯುತ್ತಿವೆ. ಈ ಅವಸ್ಥೆಯನ್ನು ಬದಲಿಸದಿರುವುದರಿಂದ, ಏರುಪೇರು ಮಾಡದಿರುವುದರಿಂದ ಇಡೀ ವಿಶ್ವವೇ ಹಾಳಾಗುವ ಸಂಭವವಿದೆ. ಆದ್ದರಿಂದ ಗಾಂಧೀ ಪ್ರಣೀತ ಶಾಂತಿಮಯ ಆಂದೋಲನಗಳ ನೆರವನ್ನು ಪಡೆದು ಪ್ರಪಂಚದ ದುರ್ಬಲರನು ಈ ಆತ್ಮಘಾತುಕತೆಯಿಂದ ಉಳಿಸಬೇಕಾಗುತ್ತದೆ."

"ಭಗವಾನ್ ಬುದ್ಧನ ನಂತರ ಗಾಂಧೀಜಿ ಅವರಂತಹ ಪೂಜ್ಯನೀಯ ವ್ಯಕ್ತಿಯನ್ನು ಭಾರತ ಕಂಡಿಲ್ಲ ಪ್ರಸ್ತುತ ಎಲ್ಲಾ ಸಂಭಾವ್ಯತೆಯಲ್ಲೂ ಇಡೀ ಜಗತ್ತಿನಲ್ಲಿಯೇ ಅತ್ಯಂತ ಪ್ರಮುಖವಾದ ಹಾಗೂ ನಿಸ್ಸಂದೇಹವಾಗಿ ಅಷ್ಟೇ ಕುತೂಹಲ ಕೆರಳಿಸುವ ವ್ಯಕ್ತಿ. ಮುಂದೆ ಶತಮಾನಗಳಷ್ಟು ಕಾಲ ಇವರ ಸಮಕಾಲೀನ ವ್ಯಕ್ತಿಗಳ ಹೆಸರಿಲ್ಲದೆ ಹೋಗಬಹುದಾದರೂ ಪ್ರಪಂಚದಾದ್ಯಂತ ಜನ ಇವರನ್ನು ಮಾತ್ರ ನೆನಪಿನಲ್ಲಿಡುತ್ತಾರೆ. ಅಸಿಸಿಯ

ನಂತರ, ಪ್ರಾನ್ಸಿಸ್ ನಂತರ ಇಂತಹ ಕರುಣಾಮೂರ್ತಿ, ನಿಷ್ಕಾಮ ಯೋಗಿ, ಶುದ್ಧ ಮನಸ್ಸಿನ, ಶತ್ರುಗಳ ವಿರುದ್ಧ ಅಪಾರವಾದ ಕ್ಷಮಾಗುಣವಿರುವ, ಪ್ರೇಮಮಯಿಯಾದ ವ್ಯಕ್ತಿಯನ್ನು ಇತಿಹಾಸ ಎಂದೂ ಕಂಡರಿಯದು."

– **ವಿಲ್‌ಡ್ಯುರ್ಯಾಂಟ್** ("The case for india book ನ ಕನ್ನಡ "ಮುಕ್ತ ಜನ ಭಾರತ ಪುಸ್ತಕದಿಂದ ಅನುವಾದ)

—o—

"ಗಾಂಧಿ ನೆಲದಲ್ಲಿಯೇ ಗಾಂಧಿ ತತ್ವ ಗೆಲ್ಲಲೇ ಇಲ್ಲ. ಮುಂದಾದರೂ ಗಾಂಧಿ ತತ್ವ ಅನುಸರಿಸಿವರೆ ಈಗ ಎದುರಿಸುತ್ತಿರುವ ಸಮಸ್ಯೆಯಲ್ಲಿ ಅರ್ಧಸಮಸ್ಯೆ ಪರಿಹಾರವಾದಂತೆ. ಈ ನಿಟ್ಟಿನಲ್ಲಿ ಸರ್ಕಾರಗಳು ಯೋಚಿಸಬೇಕು."

– **ಪ್ರೊ॥ ಯಮಗುಚಿ ಹಿಯೋಯಿಚಿ,** (ಜಪಾನಿನ ಬಂಕ್‌ಯೋ. ವಿಶ್ವವಿಧ್ಯಾನಿಲಯದ ಗಾಂಧಿವಾದಿ (2014ರಲ್ಲಿ ಮೈಸೂರಿನ ಸಮಾರಂಭದಲ್ಲಿ ಮಾಡಿದ ಭಾಷಣದಿಂದ)

—o—

"ಗಾಂಧಿಯವರು ಈ ದೇಶದಲ್ಲಿ ಸರ್ವಸ್ವವನ್ನು ತಮ್ಮನ್ನು ಕೂಡ ಅರ್ಪಿಸಿ ದೇಶದ ಸೇವೆಗಾಗಿ ಮಾತ್ರ ಬಾಳುವ ಸನ್ಯಾಸಿಯ ಉಚ್ಚತಮ ಆದರ್ಶವನ್ನು ಮುಂದಿಟ್ಟಿದ್ದಾರೆ,,, ಮಾನವತೆಯ ಉನ್ನತಿಯನ್ನು ಸೂಚಿಸುವ ಎಲ್ಲ ಬಗೆಯ ಸದ್ಗುಣಗಳನ್ನು ಇವರು ಮೈಗೂಡಿಸಿ ಕೊಂಡಿದ್ದಾರೆ."

– **ಅನಿಬೆಸೆಂಟ್** (ಥಿಯಾಸಾಫಿಕಲ್ ಸೊಸೈಟಿ ಸ್ಥಾಪಕರು, ಭಾರತ ಸ್ವಾತಂತ್ರ ಹೋರಾಟಗಾರರು)

—o—

"ಗಾಂಧೀಜಿ ಕಾರ್ಯಕಾರಿ, ವಿನೋದಿ, ವಿವೇಕಿಯಾದ ಮಾನವ, ಹಾಸ್ಯ ಸಂತೋಷಗಳನ್ನು ಬಲ್ಲವರು, ನಿರ್ದೋಷಿಯಾದವರು. ಅವರು ಹತ್ತನೇ ಅವತಾರಗಳಲೆಲ್ಲಾ ಶ್ರೇಷ್ಠವಾದುದು. ಅವರು ಕಾಣಿಸಿ ಕೊಂಡಿರುವ ಬುದ್ಧ, ಪುನರ್ಜನ್ಮವೆತ್ತಿರುವ ಯೇಸು ಗೀತೆಯ ಸ್ಥಿತ ಪ್ರಜ್ಞ, ಉಪನಿಷತ್ತುಗಳ ಪೂರ್ಣ ಪುರುಷನಿಗೆ ಬಹಳ ಹತ್ತಿರದವರು.

ಅವರ ಯುಗದಲ್ಲಿ ಬದುಕುವವರು ಪುಣ್ಯಶಾಲಿಗಳು. ಅವರ ವೇದಾಂತವನ್ನು ಪ್ರಚಾರ ಮಾಡುವವರು ಮೂರರಷ್ಟು ಪುಣ್ಯಶಾಲಿಗಳು, ಗಾಂಧಿ ಮರಣ ಹೊಂದಿರಬಹುದು, ಗಾಂಧೀಜಿ ಧರ್ಮನಷ್ಟ ವಾಗಬಹುದು, ಆದರೆ ಗಾಂಧೀ ಎಲ್ಲ ಕಾಲಕ್ಕೂ ಬದುಕಿರುತ್ತಾರೆ.

– ಡಾ॥ ಬಿ. ಪಟ್ಟಾಭಿ ಸೀತಾರಾಮಯ್ಯ

—o—

"ಇಪ್ಪತ್ತನೆಯ ಶತಮಾನದ ಕಟ್ಟ ಕಡೆಯ ತುದಿಯಲ್ಲಿ ನಿಂತು ಇತಿಹಾಸದ ಕಡೆಗೆ ಕಣ್ಣು ಹಾಯಿಸಿದಾಗ ಇಡೀ ಆಕಾಶವನ್ನೇ ಒಂದಿಲ್ಲೊಂದು ರೀತಿಯಲ್ಲಿ ಆವರಿಸಿದಂತೆ ತೋರುವ ಒಂದು ಆಕಾರ ಗಾಂಧಿ. 1948 ರವರೆಗೆ ಅವರು ನಡೆದಾಡುವ ಒಂದು ರೂಪವಾಗಿದ್ದರೆ, ಆನಂತರದ ಅವಧಿಯಲ್ಲಿ ಕಾಲಕಾಲಕ್ಕೆ ಸುಳಿದಾಡುವ ಒಂದು ನೆರಳಾಗಿ ಗಾಂಧಿ ನಮ್ಮೊಂದಿಗಿದ್ದಾರೆ."


– ಡಾ॥ ಚಂದ್ರಶೇಖರ ಪಾಟೀಲ (ಚಂಪಾ)
("ಗಾಂಧಿ ಎಂಬ ಹೆಸರು" ಪುಸ್ತಕದಲ್ಲಿ)

—o—

"ಸೋದರಭಾವದಿಂದ ನಿಮ್ಮನ್ನು ನಮಸ್ಕರಿಸುತ್ತೇನೆ. ನಿಮ್ಮ ಪರಿಚಯ –ವಾದುದು ಬಹಳ ಸಂತೋಷ."

– ಟಾಲ್ ಸ್ಟಾಯ್
(ಗಾಂಧೀಜಿ ಮೇಲೆ ಪ್ರಭಾವ ಬೀರಿದ ರಷ್ಯಾದ ದಾರ್ಶನಿಕ ಸಂತ)

—o—



ಬರಾಕ್ ಒಬಾಮ

ಅಮೆರಿಕಾದ ಮಾಜಿ ಅಧ್ಯಕ್ಷ

"ಶಾಂತಿ, ಸಹಿಷ್ಣುತೆ ಮತ್ತು ಪ್ರೀತಿಯಿಂದ ವಿಶ್ವವನ್ನೇ ಬದಲಾಯಿಸಿದ ಈ ಮಹಾನ್ ಚೇತನವನ್ನು ನಾವು ಸದಾ ಸ್ಮರಿಸುತ್ತೇವೆ. ಅವರು ಕಾಲತೀತರಾಗಿ 60 ವರ್ಷಗಳೇ ಕಳೆದರೂ ಅವರ ವ್ಯಕ್ತಿತ್ವದ ಬೆಳಕು ಮಾತ್ರ ವಿಶ್ವವನ್ನು ಸ್ಫೂರ್ತಿಗೊಳಿಸುತ್ತಲೇ ಇದೆ. ಅವರು ನನಗಷ್ಟೆ ಸ್ಫೂರ್ತಿಯಲ್ಲ ಜಗತ್ತಿನ ಲಕ್ಷಾಂತರ ಜನರಿಗೆ ಸ್ಫೂರ್ತಿ."

– (ದಿ : 8–11–2010 ರಂದು ದೆಹಲಿಯ ರಾಜ್ ಘಾಟ್‌ಗೆ ಭೇಟಿ ನೀಡಿದಾಗ ಬರೆದ ಸಂದರ್ಭದಲ್ಲಿ ದಾಖಲಿಸಿದ್ದು)

"ನೀವು ಯಾರ ಜೊತೆಯಲ್ಲಿ ಔತಣದಲ್ಲಿ ಭೋಜನ ಸ್ವೀಕರಿಸಲು ಇಷ್ಟಪಡುತ್ತಿ ಎಂದು ಕೇಳಿದಾಗ "ನನಗೆ ಮಹಾತ್ಮ ಗಾಂಧೀಯಂತಹವರ ಜೊತೆಯಲ್ಲಿ ಭೋಜನ ಸ್ವೀಕರಿಸಲು ಇಷ್ಟ ಎನ್ನುತ್ತೇನೆ."

– **ಬರಾಕ್ ಒಬಾಮ** (ಅಮೆರಿಕದ ಮಾಜಿ ಅಧ್ಯಕ್ಷ)

—o—



ಲಿಯೋಬ್ಲಮ್

ಕಮ್ಯೂನಿಷ್ಟ್ ನಾಯಕ

"ನಾನೆಂದೂ ಗಾಂಧಿಯನ್ನು ನೋಡಿಲ್ಲ ಆತನ ಭಾಷೆ ನನಗೆ ತಿಳಿದಿಲ್ಲ. ಆತನ ದೇಶದಲ್ಲಿ ನಾನು ಕಾಲಿಟ್ಟಿಲ್ಲ. ಆದರೂ ಯಾರೋ ಸಮೀಪದ ಬಂಧುವನ್ನು ಕಳೆದು ಕೊಂಡಷ್ಟು ದುಃಖ ನನಗಾಗುತ್ತಿದೆ. ಈ ಅಸಾಧಾರಣ ಮನುಷ್ಯನ ಸಾವಿನಿಂದ ಲೋಕವೆಲ್ಲಾ ದುಃಖದಲ್ಲಿ ಮುಳುಗಿದೆ."

– **ಲಿಯೋಬ್ಲಮ್** (ಕಮ್ಯೂನಿಷ್ಟ್ ನಾಯಕ, ಗಾಂಧಿ ನಿಧನರಾದಾಗ)

—o—



ದಲೈಲಾಮ

(ಟಿಬೆಟಿಯನ್ ಧರ್ಮಗುರು ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತರು)

"ಗಾಂಧೀಜಿ ಅವರ ಜೀವನ ನನಗೆ ಬೋಧ ಪ್ರದ ಪ್ರೇರಕ."

—o—



ನೆಲ್ಸನ್ ಮಂಡೇಲಾ

ಗಾಂಧೀಜಿ ಅವರ ವಿಚಾರಗಳಿಂದ ಪ್ರಭಾವಿತರಾದ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷರು

"ಗಾಂಧೀಜಿ ಅವರೇ ನನಗೆ ಸ್ಫೂರ್ತಿ."

—o—

"ಗಾಂಧಿ ಸತ್ಯ ಮತ್ತು ಪ್ರೀತಿಯ ಮಾನವ ಜ್ವಾಲಾಮುಖಿ"

– ಪ್ರೊ. ಜಿ. ರಾಮಚಂದ್ರನ್

(ಅಮೆರಿಕಾದಲ್ಲಿ ಗಾಂಧೀಜಿ ಬಗ್ಗೆ ನೀಡಿದ ಉಪನ್ಯಾಸದಲ್ಲಿ ಸಭಿಕ ಪ್ರಾಧ್ಯಾಪಕರೊಬ್ಬರು ಗಾಂಧೀಜಿ ಅವರ ವ್ಯಕ್ತಿತ್ವವನ್ನು ಒಂದು ವಾಕ್ಯದಲ್ಲಿ ಹೇಳಿ ಎಂದು ಕೇಳಿದಾಗ)

—o—



ಲೂಯಿ ಫಿಷರ್

(ಗಾಂಧೀಜಿ ಜೀವನ ಚರಿತ್ರೆ ಬರೆದ ವಿದೇಶಿ ಚಿಂತಕ)


"ನಾನು ಲೆನಿನ್, ಚರ್ಚಿಲ್, ಫ್ರಾಂಕ್ಲಿನ ರೂಸ್‌ವೆಲ್ಟ್ ವಾಕೀ, ಸ್ಟಾಲಿನ್, ಲಿತ್ವಿನೋವ್, ಆಲಿ, ಐನ್‌ಸ್ಟಿನ್, ಲಾಯ್ಡ್ ಜಾರ್ಜ್, ಎಲಿನಾರಾ ರೂಸ್‌ವೆಲ್ಟ್ ಮತ್ತು ಇನ್ನೂ ಹಲವು ಗಣ್ಯಾತಿಗಣ್ಯರನ್ನು ಭೇಟಿಮಾಡಿದ್ದೇನೆ. ಆದರೆ ಗಾಂಧೀಜಿ ಅವರಂತಹ ಅಸಾಧಾರಣ ವ್ಯಕ್ತಿಯನ್ನು ನಾನು ಎಂದೂ ಭೇಟಿ ಮಾಡಿರಲಿಲ್ಲ."

"ಈ ಬಗೆಯ ಮಹಾ ಪುರುಷನ ಸರಿ ಸಾಟಿಯನ್ನು ಇತಿಹಾಸದಲ್ಲಿ ಹುಡುಕಬೇಕಾದರೆ ನಾವು ಎರಡು ಸಾವಿರ ವರ್ಷಗಳಾಚೆ ನಮ್ಮ ದೃಷ್ಟಿಯನ್ನು ಚಾಚಬೇಕಾಗುವುದು".

"ಆಧುನಿಕ ಇತಿಹಾಸದಲ್ಲಿ ಯಾವ ಮನುಷ್ಯನಿಗಾಗಿಯೂ ಇಷ್ಟು ತೀಕ್ಷ್ಣವಾಗಿ ದುಃಖಿಸಿದ್ದು ಕಂಡು ಬಂದಿಲ್ಲ.

"ಮಹಾತ್ಮ ಗಾಂಧಿ ಓರ್ವ ಶ್ರೇಷ್ಠ ವ್ಯಕ್ತಿ. ಆದರೆ ಅವರು ಕೋಮಲ ಸರಳ ಹಾಗೂ ಸಾಮಾನ್ಯ ವ್ಯಕ್ತಿ. ಏಕೆಂದರೆ ಅವರಿಗೆ ಯಾವ ಅಧಿಕಾರ, ಆಸ್ತಿ, ಅಂತಸ್ತು, ಗೌರವ. ಪಾಂಡಿತ್ಯ ವೈಜ್ಞಾನಿಕ ಪರಿಣತಿ ಅಥವಾ ವಿಶೇಷ ಪದವಿಗಳು ಇರಲೇ ಇಲ್ಲ. ಆದಾಗ್ಯೂ ವಿಶ್ವದ ಮಹಾನ್ ಪುರುಷರು, ಸರ್ಕಾರಗಳು, ನಾಯಕರು, ಅವರು ಮರಣ ಹೊಂದಿದಾಗ ಕಂಬನಿ ಸುರಿಸಿದರು."

—o—



ಜೆ.ಸಿ. ಸ್ಮಟ್ಸ್

(ಗಾಂಧೀಜಿ ಅವರನ್ನು ಹಲವು ವರ್ಷ ಜೈಲಿನಲ್ಲಿ ಇಟ್ಟಿದ್ದ ದಕ್ಷಿಣಾ ಅಫ್ರಿಕಾದ ಬ್ರಿಟಿಷ್ ಅಧಿಕಾರಿ ಸ್ಮಟ್ಸ್ ಆಡಳಿತ ವೈಖರಿ ಮೆಚ್ಚಿ ಜೈಲಿನಲ್ಲಿದ್ದಾಗ ಗಾಂಧೀಜಿ ತಾವೇ ತಯಾರು ಮಾಡಿ ಪಾದರಕ್ಷೆಗಳನ್ನು ಕೊಡುಗೆಯಾಗಿ ಅರ್ಪಿಸಿದಾಗ" ಇವುಗಳನ್ನು ಧರಿಸುವಷ್ಟು ಯೋಗ್ಯತೆ ನನಗಿಲ್ಲ" ಎಂದು ಹೇಳಿದರು.)

"ಇಂತಹ ಮಹಾನ ವ್ಯಕ್ತಿ ಗಾಂಧೀಜಿ ಅವರನ್ನು ಪಡೆದ ಭಾರತೀಯರು ಪುಣ್ಯವಂತರು. ಭಾರತಕ್ಕೆ ಮಾತ್ರ ಸ್ವಾತಂತ್ರ್ಯವನ್ನು ತಂದದ್ದಲ್ಲದೆ, ಇವರ ಮಾರ್ಗವನ್ನು ಅನುಸರಿಸಿ, ಜಗತ್ತಿನಲ್ಲಿ ಯುದ್ಧಗಳು ಇಲ್ಲದಂತೆ ಆಗಿದೆ."

"ಗಾಂಧೀಜಿಯವರ ಕಟ್ಟಾವಿರೋಧಿಯಾಗಿದ್ದ ನಾನು ಅವರನ್ನು ವಂದಿಸುತ್ತೇನೆ."

—o—



ಮಾರ್ಟಿನ್ ಲೂಥರ್ ಕಿಂಗ್

ಗಾಂಧೀಜಿ ಅವರಿಂದ ಪ್ರಭಾವಿತರಾದ
ಅಮೇರಿಕಾದ ಕಪ್ಪು ಜನರ ನಾಯಕ

"ಮನುಕುಲ ಉಳಿಯಬೇಕಾದರೆ ಗಾಂಧೀ ಅನಿವಾರ್ಯ. ಅವರನ್ನು ನಿರ್ಲಕ್ಷಿಸಿದರೆ ನಮಗೆ ಸರ್ವನಾಶ ಖಂಡಿತ."

"ಗಾಂಧೀಜಿಯವರ ಕಟ್ಟಾವಿರೋಧಿಯಾಗಿದ್ದ ನಾನು ಅವರನ್ನು ವಂದಿಸುತ್ತೇನೆ."

"ನಾನು 70 ಬೇರೆ ರಾಷ್ಟ್ರಗಳಿಗೆ ಪ್ರವಾಸಿಯಾಗಿ ಹೋಗಬಹುದು. ಆದರೆ ಭಾರತಕ್ಕೆ ತೀರ್ಥಯಾತ್ರಿಕನಾಗಿ ಬಂದಿದ್ದೇನೆ."

"ಓದುತ್ತಾ ಹೋದಂತೆ ಗಾಂಧೀಜಿ ಆಳವಾಗಿ ನನ್ನಲ್ಲಿ ಇಳಿಯ ತೊಡಗಿದರು. ನನ್ನ ಅನುಮಾನಗಳೆಲ್ಲವೂ ಮಾಯವಾಗಿದ್ದವು. ಅವರ ದಂಡೀಯಾತ್ರೆ, ಉಪವಾಸ, ಸತ್ಯಾಗ್ರಹಗಳು ನನ್ನನ್ನು ಅಲುಗಾಡಿಸಿ ಬಿಟ್ಟವು. ಸತ್ಯಾಗ್ರಹದ ಪರಿಕಲ್ಪನೆ ತೀವ್ರವಾಗಿ ಸೆಳೆಯಿತು. ಅಹಿಂಸೆಯ ಅಗಾಧತೆಯನ್ನು ಪ್ರೀತಿಯ ನೈತಿಕತೆಯನ್ನು, ವೈಯಕ್ತಿಕ ಮಟ್ಟಕ್ಕೂ ಮಿಗಿಲಾಗಿ ಪ್ರಬಲ, ಪರಿಣಾಮಕಾರಿ ಸಾಮಾಜಿಕ ಶಕ್ತಿಯನ್ನಾಗಿ ಪರಿವರ್ತಿಸಿದ ಗಾಂಧೀಜಿ ಅವರ ಹೆಜ್ಜೆ ಇತಿಹಾಸದಲ್ಲಿ ಮೊದಲು."
"ಮಹಾತ್ಮ ಗಾಂಧೀಜಿಯವರಂತಹ ಜನರನ್ನು ಜಗತ್ತು ಇಷ್ಟ ಪಡುವುದಿಲ್ಲ. ಈ ಜಗತ್ತು ಕ್ರಿಸ್ತ ಹಾಗೂ ಲಿಂಕನ್ ಅಂತಹವರನ್ನು ಇಷ್ಟ ಪಡುವುದಿಲ್ಲ. ಭಾರತಕ್ಕೆ ತನ್ನ ಜೀವಮಾನ ಶ್ರಮಿಸಿದ ಗಾಂಧಿಯನ್ನು ಕೊಂದೇ ಬಿಟ್ಟರು, ಅಹಿಂಸೆಯನ್ನೇ ಉಸಿರಾಗಿಸಿಕೊಂಡಿದ್ದ ವ್ಯಕ್ತಿ ಹಿಂಸೆಯ ಕೈಯಲ್ಲಿ ಹತರಾದರು, ಪ್ರೀತಿಯೇ ಜೀವಾಳವಾಗಿದ್ದ ವ್ಯಕ್ತಿ ದ್ವೇಷಕ್ಕೆ ಬಲಿಯಾದರು. ಯಾವ ಕಾರಣಕ್ಕೆ ಗಾಂಧಿಯನ್ನು ಕೊಂದರೋ, ಅದೇ ಕಾರಣಕ್ಕೆ ಲಿಂಕನ್‌ರನ್ನು ಹತ್ಯೆಗೈದರು. ಇದೇ ಇತಿಹಾಸದ ದಾರಿ ಎಂದೆನಿಸುತ್ತದೆ."

"ಅಹಿಂಸೆಯ ಅಗಾಧತೆಯನ್ನು ಪ್ರೀತಿಯ ನೈತಿಕತೆಯನ್ನು ವೈಯಕ್ತಿಕ ಮಟ್ಟಕ್ಕೂ ಮಿಗಿಲಾಗಿ ಪ್ರಭು. ಪರಿಣಾಮಕಾರಿ ಸಾಮಾಜಿಕ ಶಕ್ತಿಯನ್ನಾಗಿ ಪರಿವರ್ತಿಸಿದ ಗಾಂಧೀಜಿಯ ಹೆಜ್ಜೆ ಇತಿಹಾಸದಲ್ಲೆ ಮೊದಲು".

"ಮಾರ್ಟಿನ್ ನಾಯಕತ್ವದ ಮೇಲೆ ಗಾಂಧೀಜಿಯ ಜೀವನ ಭೋದನೆಗಳ ಪ್ರಭಾವ ಅಪಾರವಾದದ್ದು."

– **ಶ್ರೀಮತಿ ಕೋರೆಟ್ಟಾ ಕಿಂಗ್ (ಮಾರ್ಟಿನ್ ಲೂಥರ್ ಕಿಂಗ್ ಪತ್ನಿ)**

"ಲೌಕಿಕ ಶಕ್ತಿಗಳ ಮೇಲೆ ಆತ್ಮ ಶಕ್ತಿಯ ಪ್ರಭಾವವೆಷ್ಟಿದೆ ಎಂಬುದನ್ನು ನಂಬುವಂತೆ ಗಾಂಧಿಯ ಹಾಗೆ ಯಾರೂ ಎಂದೂ ತೋರಿಸಿ ಕೊಟ್ಟಿಲ್ಲ. ಜನರು ಅತ್ಯಾಗ ಇದೇ ಅವರ ಮೇಲೆ ಪರಿಣಾಮವನ್ನುಂಟು ಮಾಡಿದ್ದು. ಎಲ್ಲಿ ನೋಡಿದರು ಅಹಿತ ಶಕ್ತಿಗಳು ಪ್ರಬಲವಾಗಿವೆ. ಆತನ ಮರಣ ವಾರ್ತೆ ಅನಂತ ಕಗ್ಗತ್ತಲನ್ನು ತೋರಿಸಿತು. ಯಾರೂ ಸತ್ಯದ, ದಯೆಯ, ಆತ್ಮ ತ್ಯಾಗದ, ವಿನಯದ ಸೇವೆ, ಅಹಿಂಸೆಯ ಜೀವನ ನಡೆಸಿ, ಮಹಾಶತ್ರುಗಳನ್ನು ಎದುರಿಸಿ. ತನ್ನ ದೇಶಿಯರ ದೌರ್ಜನ್ಯವನ್ನೆದುರಿಸಿ ನಿರಂತರವಾಗಿ ಹೋರಾಡಿದ ಕೈ ಹೋರಾಟದಿಂದ ಮಲಿನವಾಗಲಿಲ್ಲ. ಈ ಅಸತ್ಯ, ದ್ವೇಷಗಳನ್ನು ತನ್ನೆಡೆಗೆ ಸುಳಿಯದಂತೆ ಹೋರಾಡಿದರು."

– **ಸರ್ ಸ್ಟ್ರಾಫರ್ಡ್ ಕ್ರಿಪ್ಸ್**

"ಗಾಂಧಿ ಎಂಬುದು ಒಂದು ಸಿದ್ಧಾಂತ ಎಂದು ಸಾಕಷ್ಟು ಜನ ತಿಳಿದಿದ್ದಾರೆಯೇ ಹೊರತು ಗಾಂಧಿಯೆಂಬುದು ಜೀವಂತ ಸ್ಥಿತಿ, ಬೆಳೆಯ ಬೇಕಾದ, ಬದಲಾಗ ಬೇಕಾದ ಸ್ಥಿತಿ ಎಂಬುದು ಅವರಿಗೆ ಗೊತ್ತಿಲ್ಲ."

– **ಪಿ.ಲಂಕೇಶ್**

"ಗಾಂಧಿ, ಧೂಳಾಗಿದ್ದ ನಮ್ಮನ್ನು ಮಾನವನ್ನಾಗಿ ಮಾಡಿದರು."

– **ಡಿ.ಎಫ್.ಕರಾಕ** (ಬ್ಲಿಟ್ಸ್ ಪತ್ರಿಕೆ ಪತ್ರಕರ್ತ)

"ಗಾಂಧಿ ಒಂದು ವ್ಯಕ್ತಿಯಲ್ಲ, ಒಂದು ಪಂಥ, ಒಂದು ಮಾರ್ಗ, ಅವರು ಶಿಲ್ಪದಲ್ಲಿ ಜಕಣಚಾರಿ ಇದ್ದಂತೆ."

– **ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ**

"ಈ ಶತಮಾನದ ಮಹಾಪುರುಷರಲೆಲ್ಲಾ ಗಾಂಧೀಜಿ ಅವರೇ ಅತ್ಯಂತ ಶ್ರೇಷ್ಠರೆಂದು ಪರಿಗಣಿಸಬಹುದು."

– **ಇ.ಎಮ್. ಪಾರ್‌ಸ್ಟರ್**

"ಗಾಂಧೀಜಿ ಅವರ ಹಿರಿಮೆ ಅವರ ಸಿದ್ಧಿ – ಸಾಧನೆಯಲ್ಲಿ ಅಡಗಿಲ್ಲ, ಅವರ ಚಾರಿತ್ರ್ಯದಲ್ಲಿ ಅಡಗಿದೆ"

– **ಪ್ರೊ॥ ಎಲ್.ಡಿ. ಗ್ರೆಸ್‌ಸ್ಟೆಡ್**

"ಅವರು ಕೇವಲ ದೊಡ್ಡ ಮನುಷ್ಯರಾಗಿರಲಿಲ್ಲ. ಮಹಾಪುರುಷರೂ ಆಗಿದ್ದರು. ನೊಬೆಲ್ ಪುರಸ್ಕೃತರ ಸಾಲಿನಲ್ಲಿ ಗಾಂಧಿ ಇರಲೇಬೇಕಿತ್ತು. ನೊಬೆಲ್ ಇತಿಹಾಸದಲ್ಲಿ ಇದು ಕ್ಷಮಿಸಲಾರದ ತಪ್ಪು."

– ಡಾ॥ ಆಂಡರ್ಸ್ ಬರನಿ

(ನೊಬೆಲ್ ವಸ್ತು ಸಂಗ್ರಾಹಾಲಯದ ಕ್ಯುರೇಟರ್) ಗಾಂಧೀಜಿ 1937, 1938, 1939, 1947, 1948 ರಲ್ಲಿ 5 ಬಾರಿ ನೊಬೆಲ್ ಪ್ರಶಸ್ತಿಗೆ ನಾಮ ನಿರ್ದೇಶಿತರಾಗಿದ್ದರು)

"ಮಾನವ ಜನ್ಮವು ದೊಡ್ಡದು ಎಂಬುದನ್ನು ಮತ್ತೊಮ್ಮೆ ಭೋಧಿಸಿ ಅದಕ್ಕೆ ಸ್ವಯಂ ಸಾಕ್ಷಿಪುರುಷರಾದವರು ಮೋಹನದಾಸರು."


"ಗಾಂಧಿ ಭಾರತದ ಉತ್ತಮ ಅಂಬಿಗನಾಗಿದ್ದರು. ಇಪ್ಪತ್ತನೆಯ ಶತಮಾನ ದಲ್ಲಿ ಜಗತ್ತಿಗೆಲ್ಲಾ ಆತ್ಮ ಪ್ರಜ್ಞೆಯ ಕಿಡಿಯಾಗಿದ್ದರು."

– ಇಂದಿರಾಗಾಂಧಿ

"ಗಾಂಧಿ ಭಾರತದ ಉತ್ತಮ ಅಂಬಿಗನಾಗಿದ್ದರು. ಇಪ್ಪತ್ತನೆಯ ಶತಮಾನದಲ್ಲಿ ಜಗತ್ತಿಗೆಲ್ಲಾ ಆತ್ಮ ಪ್ರಜ್ಞೆಯ ಕಿಡಿಯಾಗಿದ್ದರು."

– ರಾಜಮೋಹನಗಾಂಧಿ (ಗಾಂಧೀಜಿ ಮೊಮ್ಮಗ)

—o—



ಲಾರ್ಡ್ ಕ್ಲೆಮೆಂಟ್ ಆಟ್ಲಿ

(ಬ್ರಿಟನ್ ಮಾಜಿ ಪ್ರಧಾನಿ)

"ಗಾಂಧೀಜಿ ಅವರ ಧುರೀಣತ್ವವಿಲ್ಲದಿದ್ದರೆ ಭಾರತವೂ ಸಹ ಐರ್ಲೆಂಡಿನಂತೆ ವರ್ತಿಸಿ ಬ್ರಿಟಿಷ್ ಸರ್ಕಾರಕ್ಕೆ ಭಯಾನಕ ಪರಿಸ್ಥಿತಿಯನ್ನು ತಂದೊಡ್ಡಬಹುದಿತ್ತು. ಇದರಿಂದ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಕಡು ಗಂಡಾಂತರ ಒದಗಿ ಬರುತ್ತಿತ್ತು. ರಕ್ತ ಕ್ರಾಂತಿಯೆಸಗಿ ಸ್ವಾತಂತ್ರ್ಯ ಪಡೆಯುವ ಮಾರ್ಗವನ್ನು ತೊರೆದು ಭಾರತವೂ ನಗುಮೊಗದಿಂದಲೇ ಬ್ರಿಟನ್ನಿನಿಂದ ಸ್ವಾತಂತ್ರವನ್ನು ಪಡೆಯಿತು. ಇದು ಗಾಂಧೀಜಿ ಅವರ ಕ್ರಿಯಾಶಕ್ತಿಯ ಪ್ರಭಾವವಲ್ಲದೆ ಮತ್ತೇನೂ ಅಲ್ಲ. ತಮ್ಮ ಮಾರ್ಗದಲ್ಲಿ ಗಾಂಧೀಜಿ ನಿಜವಾಗಿಯೂ ಒಬ್ಬ ದೊಡ್ಡಪವಾಡ ಪುರುಷರಾಗಿದ್ದರು, ಮಹಾತ್ಮರಾಗಿದ್ದರು. ಅನೇಕ ಸಲ ಅವರ ಅಂದಾಜು ತಪ್ಪಿರಬಹುದು, ಆದರೆ ತಮ್ಮ ಮಾರ್ಗಬಿಟ್ಟು

ನಡೆಯಲಿಲ್ಲ. ತಮ್ಮ ತತ್ವದಲ್ಲಿ ನಂಜಿಕೆ ದೃಷ್ಟಿಗಳನ್ನು ಬದಿಗೊತ್ತಲಿಲ್ಲ ಅದೇ ಅವರ ವಿಜಯದ ಗುಟ್ಟು."

"ಭಾರತೀಯರಿಂದ "ರಾಷ್ಟ್ರಪಿತ ಮಹಾತ್ಮ" ಎಂದು ಗರಿಷ್ಠ ಗೌರವ ಪಡೆದುಕೊಂಡ ಗಾಂಧಿ ಒಬ್ಬ ಅದ್ವಿತೀಯರಾದ ವಿಭೂತಿ ಪುರುಷ. ಈ ಶ್ರೇಷ್ಠ ಭಾರತೀಯನ ನಿಧನದಿಂದ ಇಂಡಿಯಾ. ಮತ್ತು ಬ್ರಿಟಿಷ್ ದೇಶಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ನಷ್ಟವಾಗಿದೆ. ಜೀವನ ಪೂರ್ತಿ ತ್ಯಾಗಮಯಿ. ನಿಸ್ವಾರ್ಥ ಜೀವಿಯಾದ ಗಾಂಧಿ. ಭಾರತ ಸ್ವಾತಂತ್ರ್ಯ ಪ್ರಾಪ್ತಿಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡ "ಮಹಾನ್ ನಾಯಕ". ಅವರ ಹೋರಾಟದ ಉತ್ಕೃಷ್ಟ ಜೀವನಕ್ಕೆ ನಾವು ತಲೆಬಾಗುತ್ತೇವೆ. ಮಾನವ ಜಗತ್ತಿಗೆ ಈ ವಿಶಿಷ್ಟ ಸೇವಕನ ಹತ್ಯೆಯಿಂದ ಬ್ರಿಟನ್‌ನಲ್ಲಿ ನಾವೆಲ್ಲಾ ತುಂಬ ದುಃಖಿತರಾಗಿದ್ದೇವೆ. ಗಾಂಧಿ ಸತ್ಯದ ಶಿಖರಕ್ಕೆ ಕ್ರೌನ್, ಕ್ರಿಸ್ತನ ಪ್ರತಿರೂಪ. ಹಾಗೆಯೇ ಸದಾ ಕಾಲವೂ ಚಿರಂಜೀವಿಯಾಗಿರುತ್ತಾರೆ."

ಕ್ಲಿಮೆಂಟ್ ಆಟ್ಲಿ
(ಗಾಂಧಿ ನಿಧನರಾದಾಗ ದುಃಖಿಸಿದ್ದು)

—o—

"ಈ ಅಹಿಂಸಾ ಯೋಧ ಹಿಂಸೆಗೆ ಬಲಿಯಾದುದು ದೊಡ್ಡ ಆಘಾತಕಾರಿ ಘಟನೆಯಾಗಿದೆ".

– ಚಿಯಾಂಗ್ ಕೈ ಶೇಕ್

"ಗಾಂಧೀಜಿ ಒಬ್ಬ ವ್ಯಕ್ತಿ ಸ್ವರೂಪರಲ್ಲ ನೈತಿಕ ವಿಭೂತಿ."

– ಸಿ.ಇ.ಎಂ ಜೋಡ್

"ಅಂತರಂಗದಲ್ಲಿ ಬೆಳಕುಕಂಡ ಮಹಾದೇವ ಅವರು."

– ಜೆ.ಬಿ. ಕೃಪಲಾನಿ

"ಮಾನವ ಸೇವೆಗಿಂತ ಹೆಚ್ಚಿನ ಧರ್ಮ ಗಾಂಧೀಜಿಗೆ ಅರಿಯದು. ಅದಕ್ಕಿಂತ ಹೆಚ್ಚಿನ ಧರ್ಮವಿರುವುದೆಂಬುದನ್ನು ಅವರು ನಂಬದವರು."

– ಫ್ರಾಂಕ್ ಮೋರೆಸ್

"ತಮ್ಮ ಯುಗದ ಮೇಲೆ ತಮ್ಮ ವಿಚಾರದ ಮುದ್ರೆಯನ್ನು ಒತ್ತಿ ಹೋದ ಕೆಲವೇ ಜನರಲ್ಲಿ ಗಾಂಧೀಜಿಯವರೊಬ್ಬರಾಗಿದ್ದಾರೆ."

– ಎಡ್ವರ್ಡ್ ಥಾಮ್ಸನ್

"ಗಾಂಧೀಜಿ ಅವರು ಒಬ್ಬರೇ ವ್ಯಕ್ತಿಯಲ್ಲ ದೇಶ ಬಾಂಧವರೆಲ್ಲರ ಯಾತನ ಸ್ವರೂಪ."

– ಪರ್ಲ್‌ಬರ್

—o—

ಲಾರ್ಡ್‌ರೀಡಿಂಗ್

(ಭಾರತದಲ್ಲಿ ವೈಸ್‌ರಾಯ್ ಆಗಿದ್ದ **ಲಾರ್ಡ್‌ರೀಡಿಂಗ್** ಇಂಗ್ಲೆಂಡಿನಲ್ಲಿದ್ದ ತನ್ನ ಮಗನಿಗೆ ಪತ್ರ ಬರೆದು ಗಾಂಧೀಜಿ ಅವರನ್ನು ನಾನು ಹೇಗೆ ಕಂಡೆ ಎಂಬುದನ್ನು ಕೆಳಕಂಡಂತೆ ವಿವರಿಸಿದ್ದಾನೆ.)

"ಮೊದಲ ಬಾರಿ 4 ಗಂಟೆ 30 ನಿಮಿಷಗಳ ಕಾಲ ಮಾತನಾಡಿದೆವು. ಎರಡನೆಯ ಸಲ 3 ಗಂಟೆ. ಆಮೇಲೆ 3 ಸಲವೂ 1 ಗಂಟೆಗಳ ಕಾಲ ಅನಂತರ ಆರನೇ ಬಾರಿಗೆ ಮುಕ್ಕಾಲು ಗಂಟೆ ಕಾಲ ಗಾಂಧೀಜಿಯವರ ವ್ಯಕ್ತಿತ್ವವನ್ನು ಅಳೆಯಲು ನನಗೆ ಬೇಕಾದಷ್ಟು ಅವಕಾಶವಿತ್ತು. ಅವರು ಅಂಥದೇನು ಸೆರೆ ಹಿಡಿಯುವ ರೂಪದವರಲ್ಲ. ದಾರಿಯಲ್ಲಿ ಎದುರಾಗಿದ್ದರೆ ಅವರ ಕಡೆ ನಾನು ಎರಡನೆ ಸಲ ಬಹುಷಃ ನೋಡುತ್ತಿರಲಿಲ್ಲ. ಆದರೆ ಅವರ ಮಾತಿನಲ್ಲಿ ಒಂದು ವಿಶೇಷ ಆಕರ್ಷಕ ಗುಣವಿದೆ. ನೇರವಾದ ಮಾತು, ಸುಂದರವಾದ ಇಂಗ್ಲಿಷ್ ಬಳಸುತ್ತಾರೆ. ತೂಕಮಾಡಿ ಪದ ಪ್ರಯೋಗ ಮಾಡುತ್ತಾರೆ. ಯಾವ ಸಂಕೋಚಕ್ಕೂ ಎಡೆಕೊಡುವುದಿಲ್ಲ. ಕೆಲವು ರಾಜಕೀಯ ಸಮಸ್ಯೆಗಳನ್ನು ಚರ್ಚಿಸುವಾಗ ಬಿಟ್ಟರೆ ಮಿಕ್ಕ ಹಾಗೆ ಅವರ ಸುತ್ತಾ ವಿಶೇಷ ಪ್ರಾಮಾಣಿಕತೆ ಪ್ರತಿ ಬಿಂಬಿಸುತ್ತದೆ. ಧಾರ್ಮಿಕ ನಂಬಿಕೆಗಳಲ್ಲಿ ಅವರಿಗೆ ಗಾಢವಾದ ಶ್ರದ್ಧೆ. ಅತಿರೇಕಕ್ಕೆ ಮುಟ್ಟುವಷ್ಟು ತೀವ್ರತೆಯಿಂದಲೇ ಅಹಿಂಸೆ ಮತ್ತು ಪ್ರೇಮದಲ್ಲಿ ಅವರ ಶ್ರದ್ಧೆ ಇದೆ. ಅವುಗಳ ಮೂಲಕವೇ ಭಾರತದ ವಿಮೋಚನೆ ಆಗುವುದೆಂದು, ಅವುಗಳ ಶಕ್ತಿಯಿಂದಲೇ ಬ್ರಿಟಿಷ್ ಸರ್ಕಾರವನ್ನು ಎದುರಿಸಲು ಸಾಧ್ಯವೆಂದು ನಂಬಿದ್ದಾರೆ. ಅವರ ಧಾರ್ಮಿಕ ಮತ್ತು ವೈಚಾರಿಕ ಮೌಲ್ಯಗಳ ಪ್ರಜ್ಞೆ ಮೆಚ್ಚುವಂತಹದ್ದು. ಅತ್ಯುಚ್ಚ ಮಟ್ಟದ ಧೋರಣೆಗಳೆಂದೆ ನಾನು ಭಾವಿಸಿದ್ದೇನೆ. ಆದರೆ ರಾಜಕೀಯ ಕ್ಷೇತ್ರಕ್ಕೆ ಅವುಗಳನ್ನು ಅನ್ವಯಿಸುವ ಅವರ ಪ್ರಯತ್ನ ನನಗೆ ಪೂರ್ಣ

ಅರ್ಥವಾಗದು. ನಾವು ಪರಸ್ಪರ ಮನ ಬಿಚ್ಚಿ ಮಾತನಾಡಿದೆವು. ಅವರು ಅತ್ಯಂತ ವಿನಯದಿಂದ ನಡೆದು ಕೊಂಡರು. ಅತ್ಯುತ್ಕೃಷ್ಟ ಸಭ್ಯತೆ ಅವರದು. ತನ್ನ ಮಾತು ಯಾವ ರೀತಿಯಲ್ಲೂ ತಪ್ಪದಂತೆ ಎಚ್ಚರ ವಹಿಸಿ ನನ್ನೊಡನೆ ವಿವಿಧ ಚರ್ಚೆಗಳಲ್ಲಿ ಪಾಲ್ಗೊಂಡರು.

ಚರ್ಚಿಸುವಾಗ ಬಿಟ್ಟರೆ ಮಿಕ್ಕ ಹಾಗೆ ಅವರ ಸುತ್ತಾ ವಿಶೇಷ ಪ್ರಾಮಾಣಿಕತೆ ಪ್ರತಿ ಬಿಂಬಿಸುತ್ತದೆ. ಧಾರ್ಮಿಕ ನಂಬಿಕೆಗಳಲ್ಲಿ ಅವರಿಗೆ ಗಾಢವಾದ ಶ್ರದ್ಧೆ. ಅತಿರೇಕಕ್ಕೆ ಮುಟ್ಟುವಷ್ಟು ತೀವ್ರತೆಯಿಂದಲೇ ಅಹಿಂಸೆ ಮತ್ತು ಪ್ರೇಮದಲ್ಲಿ ಅವರ ಶ್ರದ್ಧೆ ಇದೆ. ಅವುಗಳ ಮೂಲಕವೇ ಭಾರತದ ವಿಮೋಚನೆ ಆಗುವುದೆಂದು, ಅವುಗಳ ಶಕ್ತಿಯಿಂದಲೇ ಬ್ರಿಟಿಷ್ ಸರ್ಕಾರವನ್ನು ಎದುರಿಸಲು ಸಾಧ್ಯವೆಂದು ನಂಬಿದ್ದಾರೆ. ಅವರ ಧಾರ್ಮಿಕ ಮತ್ತು ವೈಚಾರಿಕ ಮೌಲ್ಯಗಳ ಪ್ರಜ್ಞೆ ಮೆಚ್ಚುವಂತಹದ್ದು. ಅತ್ಯುಚ್ಚ ಮಟ್ಟದ ಧೋರಣೆಗಳೆಂದೆ ನಾನು ಭಾವಿಸಿದ್ದೇನೆ. ಆದರೆ ರಾಜಕೀಯ ಕ್ಷೇತ್ರಕ್ಕೆ ಅವುಗಳನ್ನು ಅನ್ವಯಿಸುವ ಅವರ ಪ್ರಯತ್ನ ನನಗೆ ಪೂರ್ಣ ಅರ್ಥವಾಗದು. ನಾವು ಪರಸ್ಪರ ಮನ ಬಿಚ್ಚಿ ಮಾತನಾಡಿದೆವು. ಅವರು ಅತ್ಯಂತ ವಿನಯದಿಂದ ನಡೆದು ಕೊಂಡರು. ಅತ್ಯುತ್ಕೃಷ್ಟ ಸಭ್ಯತೆ ಅವರದು. ತನ್ನ ಮಾತು ಯಾವ ರೀತಿಯಲ್ಲೂ ತಪ್ಪದಂತೆ ಎಚ್ಚರ ವಹಿಸಿ ನನ್ನೊಡನೆ ವಿವಿಧ ಚರ್ಚೆಗಳಲ್ಲಿ ಪಾಲ್ಗೊಂಡರು.

– **ಲಾರ್ಡ್‌ರೀಡಿಂಗ್** (ಭಾರತದಲ್ಲಿ ವೈಸ್‌ರಾಯ)
(ತೆಂಡುಲ್ಕರ್ ಅವರ "ಮಹಾತ್ಮ" ಪುಸ್ತಕದಿಂದ)

— o —

"ಗಾಂಧೀಜಿ ಅವರು ಜೀವನದ ಯಾವ ಸೋಟವನ್ನು ಅಲಕ್ಷಿಸುತ್ತಿರಲಿಲ್ಲ. ಅವರು ಪ್ರತಿಯೊಂದನ್ನು ಗಂಭೀರವಾಗಿ ಯೋಚಿಸಿ ತಮ್ಮ ಮೂಲ ನಂಬಿಕೆಗಳಾದ ಆತ್ಮ ಗೌರವ ಮತ್ತು ಕಾರ್ಯಗೌರವ, ಸತ್ಯ ಮತ್ತು ಅಹಿಂಸೆಗಳ ಪಾವಿತ್ರತೆಗಳಿಗೆ ಹೊಂದಿಕೊಳ್ಳುವಂತೆಯೇ ಕಾರ್ಯಾಚರಣೆ ಮಾಡುತ್ತಿದ್ದರು."

"ಗಾಂಧೀಜಿ ಭೌತಿಕವಾಗಿ ಕಣ್ಮರೆಯಾದರೂ, ಜಗತ್ತು ಅವರನ್ನೂ ಮರೆತರೂ, ಅವರ ಪ್ರಾಣ ಸ್ವರೂಪದಂತಿರುವ ಉಪದೇಶ

ಪರೋಕ್ಷವಾಗಿ ಯಾದರೂ ನಾನಾ ಮಾಧ್ಯಮಗಳ ಮೂಲಕ ಮನುಕುಲದ ಶ್ರೇಯ ಸಾಧನೆಯಲ್ಲಿ ಸದಾ ಕ್ರಿಯಾಶೀಲವಾಗುತ್ತದೆ."

– ನಾಡೋಜ ಡಾ॥ ದೇ. ಜವರೇಗೌಡ
ವಿಶ್ರಾಂತ ಕುಲಪತಿಗಳು (ಲೋಕದ ಬೆಳಕು ಪುಸ್ತಕದಲ್ಲಿ)

—o—

"ಗಾಂಧೀಜಿ ಅವರನ್ನು ಯಾವ ಕಾರಣಕ್ಕೆ ಪ್ರಸ್ತಾಪಿಸಲಾಗುತ್ತಿದೆ ಎಂಬುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ.. ಆಧುನಿಕತೆ, ಸಂಪ್ರದಾಯ, ದೇಶಪ್ರೇಮ, ಶಿಕ್ಷಣ, ಆರೋಗ್ಯ, ಧರ್ಮ, ಸತ್ಯ, ಸತ್ಯಾಗ್ರಹ, ಸ್ವಾತಂತ್ರ್ಯ, ನ್ಯಾಯ, ಉಪವಾಸ, ಪ್ರತಿಭಟನೆ, ಸರಳತೆ, ಇಂದ್ರಿಯ ನಿಗ್ರಹ, ಸಸ್ಯಾಹಾರ, ಸೇವೆ, ಕೋಮು, ಸೌಹಾರ್ದ, ಸಹಕಾರ, ಗುಡಿಕೈಗಾರಿಕೆ,, ರಾಜಕೀಯ, ಪರಿಸರ, ಅಸ್ಪೃಶ್ಯತೆ ನಿವಾರಣೆ, ಮಹಿಳಾ ಸಬಲೀಕರಣ ಮಾನವೀಯತೆ, ದೇವರು, ಕುಟುಂಬ ಯೋಜನೆ, ಸೌಂದರ್ಯ, ಮಕ್ಕಳಿಗೆ ಪೋಷಣೆ, ನಂಬಿಕೆ, ಪ್ರಾಮಾಣಿಕತೆ, ಮನೆ ನಿರ್ಮಾಣ, ಹೀಗೆ ನಮ್ಮ ಬದುಕಿನ ಎಲ್ಲ ವಿವರಗಳ ಕುರಿತು ಒಂದಿಲ್ಲೊಂದು ಕಾರಣಕ್ಕೆ ಗಾಂಧಿ ಪ್ರಸ್ತಾಪಗೊಳ್ಳುತ್ತಲೇ ಹೋಗುತ್ತಾರೆ.

– ರವಿಕುಮಾರ್ (ರಜನಿಭಕ್ಷಿ ಅವರ "ಮುತ್ತಜ್ಜನ ಭಾರತ" ಎಂಬ ಪುಸ್ತಕದಲ್ಲಿ)

"ಶ್ರೀ ಸಾಮನ್ಯನೊಂದಿಗೆ ಬೆರೆತು, ಅವರೊಂದಿಗೆ ತನ್ನನ್ನು ಗುರ್ತಿಸಿಕೊಂಡು, ಅವರ ಸಮಸ್ಯೆಯನ್ನು ಅರಿಯುವುದರೊಂದಿಗೆ ಅದನ್ನು ಪರಿಹರಿಸುವ ಸಾಮರ್ಥ್ಯ ಸೃಷ್ಟಿಯೇ ಬಾಪೂಜಿಯ ಮಾಂತ್ರಿಕತೆಯ ರಹಸ್ಯ."

– ಶಂಕರದಯಾಳ್ ಶರ್ಮ (ಮಾಜಿರಾಷ್ಟ್ರಪತಿ)

"ಸತ್ಯ ಪ್ರೇಮಗಳ ಆಧಾರದ ಮೇಲೆ ಪರಸ್ಪರ ವಿರೋಧಿಗಳು ಸ್ನೇಹಿತ ರಾಗಬಹುದೆಂಬ ಪ್ರಯೋಗ ನಡೆಸಿದ್ದಾರೆ. ಜಗತ್ತಿನ ಎಂಥ ಕ್ಲಿಷ್ಟಕರವಾದ ಸಮಸ್ಯೆಗಳನ್ನಾದರೂ ಬಗೆಹರಿಸಿಕೊಳ್ಳಬಹುದೆಂಬುದಕ್ಕೆ ಮಹಾತ್ಮ ಗಾಂಧೀಜಿ ಅವರ ಜೀವನವೇ ಜ್ವಲಂತ ದರ್ಶನ."

– ರೊನಾಲ್ಡ್ ರೇಗನ್ (ಅಮೇರಿಕಾದ ಮಾಜಿ ಅಧ್ಯಕ್ಷ)

"ಸಂಕಷ್ಟಗಳಿಂದ ತೊಳಲಾಡುತ್ತಿರುವ ಇಂದಿನ ಜಗತ್ತಿನಲ್ಲಿ ಗಾಂಧಿ ಅವರು ಕೇವಲ ವ್ಯಕ್ತಿಯಾಗಿರದೇ ಸುಖ-ಶಾಂತಿ ಜೀವನದ ಪ್ರವರ್ತರಾಗಿದ್ದರು."

-ಶ್ರೀಮತಿ ಪರ್ಲ್‌ಬಕ್ (ಬರಹಗಾರ್ತಿ)

"ದೀನ ದಲಿತರ ವಸ್ತ್ರಧಾರಿ ರಾಜಕೀಯ ನೇತಾರ ಗಾಂಧಿ."

– ಅಬ್ದುಲ್ ಖಾದರ್

"ನಿಸ್ಸಂದೇಹವಾಗಿ ಗಾಂಧಿ ಓರ್ವ ಶ್ರೇಷ್ಠ ಪುರುಷ. ಅವರ ಘನತೆ ಹಾಗೂ ಗಾಂಭೀರ್ಯ ಎಂದರೆ ಅವರು ತಮ್ಮ ದೇಶದ ಪ್ರಜೆಗಳಲ್ಲದೆ ವಿಶ್ವದ ಮಾನವರ ಮನಗಳಲ್ಲಿ ಬೆರೆತ ಓರ್ವ ದೈವೀ ವ್ಯಕ್ತಿಯಾಗಿದ್ದರು."

– ಜಿ.ಡಿ.ಹೆಚ್. ಕೋಲ್ (ಇಂಗ್ಲೆಂಡ್‌ನ ಶ್ರೇಷ್ಠ ಬರಹಗಾರ)

"ಮಹಾತ್ಮ ಗಾಂಧಿಯವರ ಜೀವನ ಹಾಗೂ ಅವರ ಭೋಧನೆಗಳು ಇಂದಿನ ನಿರಾಶೆಯ ಹಾಗೂ ಅಸೂಯೆಯಿಂದ ಕೂಡಿದ ಕಗ್ಗತ್ತಲಿನ ಜಗತ್ತಿಗೆ ದಾರಿ ದೀಪದಂತಿತ್ತು.

– ಥಾಕಿನ್ನು (ಬರ್ಮಾ ದೇಶದ ಪ್ರಧಾನಿ)

"ಆಧುನಿಕ ಯುಗದ ಶ್ರೇಷ್ಠ ವ್ಯಕ್ತಿಯಾದ ಗಾಂಧಿಯವರು, ರಸ್ಕಿನ್ನನಿಗಿಂತ ಅಧಿಕ ವೇದಾಂತಿಗಳು, ಟಾಲ್‌ಸ್ಟಾಯ್‌ವರಿಗಿಂತ ವಾಸ್ತವಿಕರು, ಹಾಗೂ ಥೋರೋಗಿಂತ ಅಧಿಕ ನೈತಿಕ ವ್ಯಕ್ತಿಯಾಗಿದ್ದರು."

– ಶ್ರೀ ಕುಮಾರನ್ ನಾಯರ್ ಎಂ.ಪಿ

"ಭಾರತೀಯ ಸಂಸ್ಕೃತಿಯ ಸಾರ ಸಂಗ್ರಹ ರೂಪವೇ ಗಾಂಧೀಜಿ"

– ಡಾ|| ಶಿವಕುಮಾರ ಸ್ವಾಮೀಜಿ (ಪೀಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ)

"ಗಾಂಧೀಜಿ ಈ ಕನಸಿನ ಭೂಮಿಯಲ್ಲಿ ಭದ್ರವಾಗಿ ಕಾಲೂರಿದ್ದಾರೆ. ಈ ಆದರ್ಶವಾದಿ ಅತ್ಯಂತ ವ್ಯವಹಾರಿಕ ವ್ಯಕ್ತಿ."

– ಆಲ್ಡಸ್ ಹಕ್ಸ್ಲೆ

"ಗಾಂಧೀಜಿ ಅವರು ಭೂಮಿಯ ಜೀವಂತ ಶಕ್ತಿಗಳೆಲ್ಲ ತಮ್ಮ ಸುತ್ತ ನೆರೆಯುವಂತೆ ಮಾಡಿಕೊಂಡರು. ಅವರು ತಮ್ಮ ಸಾವಿಗೆ ಮುಂಚೆ ತೋರಿದಂತಹ ದೃಶ್ಯವನ್ನು ಭರತಖಂಡವಲ್ಲದೆ ಬೇರಾವ

ರಾಷ್ಟ್ರವಾದರೂ ತೋರಿಸಬಹುದಾಗಿತ್ತೆ ? ಯುದ್ಧದಲ್ಲಿ ಒಬ್ಬರನೊಬ್ಬರು ಎದುರಿಸಲು ಸನ್ನದ್ಧರಾಗಿ ನಿಂತ ಎರಡು ರಾಷ್ಟ್ರಗಳ ಮಧ್ಯೆ ತನ್ನ ಸಾವನ್ನೆ ಅವರಿಗೆ ಬೆದರಿಕೆಯಾಗಿ ಒಡ್ಡಿರುವ ಈ ಕ್ಷೀಣಕಾಯ, ಅಸ್ತ್ರರಹಿತ ವೃದ್ಧ, ಅಭಿನವ ಕೃಷ್ಣನೆಂಬಂತೆ ನಡುವೆ ಬಂದು ನಿಂತಿದ್ದಾನೆ !"

– **ಲೂಯಿ ರೆನೋ**

"ಸಾಮ್ರಾಜ್ಯ ಶಾಹಿಗಳು ವಿಜೃಂಭಿಸುತ್ತಿದ್ದ ಕಾಲದಲ್ಲಿ ದಬ್ಬಾಳಿಕೆಯೆ ಮೇಲುಗೈ ಪಡೆದಿತ್ತು. ಅದು ಸರ್ವಾಧಿಕಾರಿ ಶಕ್ತಿಯಾದಾಗ ಸಹಜ - ವಾಗಿಯೇ ಬಲಾಢ್ಯರೆದುರು ಬಲಹೀನರು ತಲೆಬಾಗಬೇಕಿತ್ತು. ಅಂಥ ಸ್ಥಿತಿಯಲ್ಲಿ ಪ್ರಕಟಗೊಂಡ ಗಾಂಧಿ ವಿಶ್ವದ ಅತಿದೊಡ್ಡ ಸೈನ್ಯಶಕ್ತಿಯನ್ನು ಏಕಾಂಗಿಯಾಗಿ ಹೊರಹಾಕಿದರು. ಭುಜಬಲಕ್ಕಿಂತಲೂ ಮಿಗಿಲಾದ, ಬದುಕಿಗೂ ದೊಡ್ಡದಾದ ಹಲವು ಸಂಗತಿಗಳಿರುವುದನ್ನು ಅವರು ಜಗತ್ತಿಗೆ ತೋರಿಸಿಕೊಟ್ಟರು. ದಬ್ಬಾಳಿಕೆಯ ನಾಶವನ್ನು ಅವರು ರುಜುವಾತು ಪಡಿಸಿದರು."

– **ಆಲ್ಬರ್ಟ್ ಜೆಂಟ್ ಗೊರ್ಗಿ** (ನೊಬೆಲ್ ಪ್ರಶಸ್ತಿ ಪುರಸ್ಕೃತರು)

"ಆ ಮಹಾಸಾಹಸಿಯನ್ನು ಅಳೆಯುವುದು ಹೇಗೆ,,,, ಆ ಉನ್ನತ ವ್ಯಕ್ತಿತ್ವ ಘನತೆ, ಸರಳತೆ, ಸಹಜವಾದ ಒಳ್ಳೆಯತನ, ವಿನಯ, ಆರೋಗ್ಯ ಪೂರ್ಣ ವಿನೋದ, ನಿಷ್ಕಪಟ ಮನಸ್ಸು ಸಮಗ್ರ ವ್ಯಕ್ತಿತ್ವಕ್ಕೆ ನಿಸ್ವಾರ್ಥವೇ ಗುರಿ. ಇಂಥ ವ್ಯಕ್ತಿಯನ್ನು ನಾನು ಹಿಂದೆಂದೂ ನೋಡಿ ತಿಳಿಯೇನು, ಕೇಳಿ ಅರಿಯನು."

– **ವಿಲಿಯಂ ಶಿರರ್ (ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಲೇಖಕ)**

ವಿಶ್ವ ಸಂಸ್ಥೆ 20 ಅಧಿಕಾರಿಗಲ ಸಮಿತಿಯು ವಿಶ್ವ ಹಣಕಾಸು ಸಂಸ್ಥೆ ಸಹಾಯ ಮಾಡಿರುವ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಭೇಟಿ ಕೊಟ್ಟು ಚಿಂತೆಗೀಡಾಗಿ ಅಂತಿಮವಾಗಿ ಗಾಂಧೀಜಿಯೇ ಇದಕ್ಕೆ ಪರಿಹಾರ ಎಂದು ಅಭಿಪ್ರಾಯ ಪಡುತ್ತಾರೆ." (4.12.1994 ರಂದು Hindu ಪತ್ರಿಕೆಯಲ್ಲಿ ಪ್ರಕಟವಾದ Marks Mahatma & Market ಲೇಖನದಲ್ಲಿ)

"ಕೆಲಸದಲ್ಲಿ ಗಾಂಧೀಜಿ ಒಬ್ಬ ಡಯಾಜೆನಿಸ್. ನಮ್ರತೆಯಲ್ಲಿ ಸಂತ ಪ್ರಾನ್ಸಿಸ್, ವಿವೇಕದಲ್ಲಿ ಸಾಕ್ರಟೀಸ್. ಅವರು ಈ ಎಲ್ಲ ಮಹನೀಯರ ಗುಣವಿಶೇಷಗಳನ್ನು ತಮ್ಮಲ್ಲಿ ಮೂರ್ತೀಕರಿಸಿಕೊಂಡಿದ್ದು, ತಮ್ಮ ಅಂತಿಮ ಗುರಿ ಸಾಧನೆಗಾಗಿ ನಾನಾ ವಿಧಾನಗಳಲ್ಲಿ ಬಲ ಪ್ರಯೋಗವನ್ನೇ ಅವಲಂಬಿಸಿರುವಂತಹ ಮುತ್ಸದ್ದಿಗಳ ತೀರಾ ಕ್ಷುಲ್ಲಕತೆಗಳನ್ನು ಅವರು ಪ್ರಪಂಚಕ್ಕೆ ಬಹಿರಂಗ ಪಡಿಸುತ್ತಾರೆ. ಈ ಸಂದರ್ಭದಲ್ಲಿ ಆತ್ಮಶಕ್ತಿಯ ಪ್ರಭುತ್ವ ಶಕ್ತಿಗಳ ಭೌತಿಕ ವಿರೋಧಗಳ ಮೇಲೆ ಜಯಗಳಿಸುತ್ತದೆ".

– ಡಾ. ಪ್ರಾನ್ಸಿಸ್ ನೈಲ್‌ಸನ್

"ಗಾಂಧೀಜಿ ಅವರ ಪ್ರಭಾವವು ತಾನೇ ತಾನಾಗಿ ಭಾರತದಲ್ಲಷ್ಟೇ ಅಲ್ಲ ಜಗತ್ತಿನಾದ್ಯಂತ ಬೀರಿದೆ."

– ಹ್ಯಾರಿ ಎಸ್. ಟ್ರುಮನ್ (ಅಮೇರಿಕಾದ ಮಾಜಿ ಅಧ್ಯಕ್ಷ)

"ಜಗತ್ತಿನ ಇತಿಹಾಸದಲ್ಲಿ ಗಾಂಧೀಜಿ ಸ್ಥಾನ ಬುದ್ಧ ಮತ್ತು ಏಸು ಕ್ರಿಸ್ತನಿಗೆ ಸಮಾನವಾದುದು."

"ಪ್ರತಿ ಭಾರಿ ಗಾಂಧಿ ನನ್ನೆದುರು ಕುಳಿತಾಗ ಜೀಸಸ್ ಕ್ರೈಸ್ತನ ಎದುರು ಕುಳಿತಂತೆ ನನಗೆ ಭಾಸವಾಗುತ್ತಿತ್ತು.

– ಲಾರ್ಡ್ ಮೌಂಟ್ ಬ್ಯಾಟನ್ (ಭಾರತದಲ್ಲಿ ಕೊನೆಯ ಗೌರ್ನರ್ ಜನರಲ್)

"ನಾನು ಮತ್ತು ನನ್ನ ಸ್ನೇಹಿತರು ಕ್ರಾಂತಿಕಾರಿಗಳಾಗಿರಬಹುದು, ಆದರೆ ನಾವು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮಹಾತ್ಮ ಗಾಂಧಿ ಅವರ ಶಿಷ್ಯರು."

– ಹೊ.ಚಿ. ಮಿನ್ (ಉತ್ತರ ವಿಯಟ್ನಾಂನ ಕಮ್ಯೂನಿಸ್ಟ್ ನಾಯಕ)

"ಇಪ್ಪತ್ತನೆಯ ಶತಮಾನದಲ್ಲಿ ನಿಸರ್ಗದ ಕೊಡುಗೆಗಳನ್ನು ಕುರಿತು ಮತ್ತು ಅವುಗಳನ್ನು, ಮಿತ ಬಳಕೆಯ ಕುರಿತು ಮಾತನಾಡಿದ ಮೊದಲ ವ್ಯಕ್ತಿ ಗಾಂಧೀಜಿ."

– ರೊನಾಲ್ಡ್ ಡಂಕನ್ (ಇಂಗ್ಲೆಂಡಿನ ನಾಟಕಕಾರ ಮತ್ತು ಕವಿ – 1943ರಲ್ಲಿ)

— o —

"ಭಾರತದಲ್ಲಿ ಜನ ಸಾಮಾನ್ಯರ ಬವಣೆಗಳ ಕುರಿತು ಮತ್ತು ಅವರ ವಸತಿ ಸಮಸ್ಯೆಗಳ ಕುರಿತು ಮಾತನಾಡಿದ ನಾಯಕರಲ್ಲಿ ನನಗೆ ಮಹಾತ್ಮ ಗಾಂಧೀಜಿ ಮುಖ್ಯರು. ಮನೆಗಳ ನಿರ್ಮಾಣಕ್ಕೆ ಸ್ಥಳೀಯವಾಗಿ 5 ಕಿಮೀ. ವ್ಯಾಪ್ತಿಯಲ್ಲಿ ದೊರೆಯುವ ಕಲ್ಲು, ಇಟ್ಟಿಗೆ, ಮಣ್ಣು, ಮರ ಇವುಗಳನ್ನು ಬಳಸಬೇಕೆಂದು ಬಯಸಿದವರಲ್ಲಿ ಗಾಂಧೀಜಿ ಪ್ರಥಮ ವ್ಯಕ್ತಿ. ನನ್ನ 70ನೆಯ ಇಳಿ ವಯಸ್ಸಿನಲ್ಲಿ ನನಗೆ ಅವರ ಚಿಂತನೆಗಳಲ್ಲಿ ಯಾವೊಂದು ದೋಷವು ಕಂಡು ಬಂದಿಲ್ಲ."

– **ಲಾರಿ ಬೇಕರ್** 1987 (ಇಂಗ್ಲೆಂಡಿನ ವಾಸ್ತು ಶಿಲ್ಪಿ)

—o—

"ಗಾಂಧೀಜಿ ಅವರು ಬೌದ್ಧ ಧರ್ಮದಿಂದ ಸತ್ಯ ಮತ್ತು ಅಹಿಂಸೆಯ ವಿಚಾರಗಳನ್ನು ಪಡೆದರೆ, ಕ್ರಿಶ್ಚಿಯನ್ ಧರ್ಮದಿಂದ ಪ್ರೇಮದ ವಿಚಾರವನ್ನು ಪಡೆದರು. ಇಸ್ಲಾಂ ಧರ್ಮದಿಂದ ಸಹೋದರತ್ವದ ವಿಚಾರವನ್ನು ಪಡೆದರು. ಎಲ್ಲ ಧರ್ಮಗಳಲ್ಲಿಯ ಶ್ರೇಷ್ಠ ವಿಚಾರಗಳನ್ನು ಪಡೆದು ಮಾನವ ಧರ್ಮವೆಂಬ ನವನೀತವನ್ನು ಕೊಟ್ಟರು. ಅವರು ಎಂದೂ ಬೇರೆಯವರ ಬಂಡವಾಳದಲ್ಲಿ ಯಾವುದೇ ಪ್ರಕಾರದ ವ್ಯಾಪಾರ ಮಾಡಿಲ್ಲ. ಆಯಾ ವಿಚಾರದ ಮೂಲ ಪುರುಷರಿಗೆ ತಮ್ಮ ಕೃತಜ್ಞತೆ ತಿಳಿಸಿದ್ದಾರೆ.

– **ಸುರೇಂದ್ರ ಕೌಲಗಿ** (ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಪುರಸ್ಕೃತರು)
ಜನಪದ ವಿಚಾರ ಜೂನ್–2015)

—o—

"ಬದುಕಿಗೆ ಉಸಿರು ಹೇಗೋ ಮನುಕುಲಕ್ಕೆ, ನಾಗರೀಕತೆಗೆ ಗಾಂಧಿ ಹಾಗೆ".

"20ನೆಯ ಶತಮಾನದಲ್ಲಿ ಹಿಂಸೆಯ ಪಂಥಕ್ಕೆ ವರ್ಣದ್ವೇಷ, ವಸಾಹತುವಾದ ಜಾತೀಯತೆ ಮತ್ತಿತರ ಅಂಧ ರಾಜಕೀಯ ಮತ್ತು ಸಾಮಾಜಿಕ ಕೆಡಕುಗಳ ವಿರುದ್ಧ ಯಶಸ್ವಿಯಾಗಿ ಎದುರು ನಿಂತು ಅದಕ್ಕಾಗಿ ಪರಿಣಾಮಕಾರಿಯಾದ ಅಹಿಂಸಾತ್ಮಕ ತಂತ್ರವನ್ನು ರೂಪಿಸಿದ ಏಕೈಕ ವ್ಯಕ್ತಿ ಮೋಹನದಾಸ ಕರಮಚಂದಗಾಂಧಿ."

– **ಡಾ|| ಪಿ.ಎ. ನಜರತ್**

(ಜರ್ಮನಿ ಮತ್ತು ಚೈನಾದಲ್ಲಿ ಸೇವೆ ಸಲ್ಲಿಸಿದ ಭಾರತದ ರಾಯಭಾರಿ ಮತ್ತು Gandhi An Outstanding Leader ಎಂಬ ಇವರ ಪುಸ್ತಕ 23 ವಿದೇಶಿ ಭಾಷೆಗೆ ಭಾಷಾಂತರವಾಗಿದೆ. ಈ ಪುಸ್ತಕ ಚೀನಾ ದೇಶದಲ್ಲಿ ಅತಿ ಹೆಚ್ಚು ಮಾರಾಟವಾಗಿ ಜನಪ್ರಿಯವಾಗಿದೆ.)

—o—

"ಗಾಂಧೀಜಿ ಅವರು ಸಾಮಾನ್ಯರಂತೆ ಹುಟ್ಟಿ ಸಾಮಾನ್ಯರಂತೆ ತೋರಿದರೂ ನಿರಂತರ ಸಾಧನೆಯಿಂದ ಅಸಾಮಾನ್ಯರಾದ ವ್ಯಕ್ತಿಯವರು. ಅವರು ಪವಾಡ ರಾಜಕೀಯ ದೊಂಬರಾಟದ ಮೂಲಕ ಜನರನ್ನು ವಂಚಿಸಲಿಲ್ಲ. ಅವರು ಅಪರೂಪದ ಬಹುರೂಪಿ, ಅವರು ರಾಮಭಕ್ತರು, ಸರ್ವೋದಯ ನಿಷ್ಠರು, ಹಟಗಾರರು, ನಗೆಗಾರರು, ಅಹಿಂಸಾವಾಧಿ, ಬೈರಾಗಿ, ಚಾಣಕ್ಯ ರಾಜಕಾರಿಣಿ, ಕರ್ಮಯೋಗಿ, ಕಲಿಯುಗದ ಕಲ್ಕಿ ಅವರವರ ಭಾವದರ್ಶನಗಳಿಗೆ ತಕ್ಕಂತೆ ಚಿತ್ರಿಸಿ ಕೊಳ್ಳಬಹುದು. ಜಗತ್ತಿನ ಮಹಾವ್ಯಕ್ತಿಗಳಂತೆ ಅವರು ಏಕಾಂಗಿ ನಿಜ. ಸತ್ಯವೇ ಅವರ ದೇವರು. ಅದನ್ನು ಪಡೆಯುವ ಮಾರ್ಗ ಅಹಿಂಸೆ. ಅವರು ಭೌತ ಜಗತ್ತಿನಿಂದ ಕಣ್ಮರೆಯಾದರೂ, ಅವರ ಚೈತನ್ಯ ಇಡೀ ಜಗತ್ತಿನಲ್ಲಿ ವ್ಯಾಪಿಸಿಕೊಂಡು ಎಲ್ಲ ದೇಶಗಳ ಜನರ ಮೇಲೆ ಅದ್ಭುತ ಪ್ರಭಾವವನ್ನು ಬೀರುತ್ತಿದ್ದಾರೆ. ಸಮಸ್ಯೆಗಳು ಎದುರಾದಾಗ, ನಿರಾಶೆಯ ಕತ್ತಲೆ ಕವಿದಾಗ, ಜನ ಗಾಂಧಿವಾದದ ಕಡೆಗೆ ಗಮನ ಹರಿಸುತ್ತಾರೆ; ಸಮಾಧಾನ ತಾಳುತ್ತಾರೆ. ಅವರಲ್ಲಿ ಬುದ್ಧ, ಕ್ರಿಸ್ತ, ಪೈಗಂಬರ್, ವಿವೇಕಾನಂದರ ಚೈತನ್ಯವನ್ನು ಕಾಣುತ್ತಾರೆ. ಮನುಕುಲವಿರುವ ತನಕ, ದಿನದಿಂದ ದಿನಕ್ಕೆ ಅವರ ಚೈತನ್ಯ ದೀಪ್ತಿ ನಿರ್ದಿಗಂತವಾಗುತ್ತ ಅನಂತವಾಗುತ್ತ, ರಾರಾಜಿಸುತ್ತದೆ."

— o —

"ಮಹಾತ್ಮ ಗಾಂಧೀ ಮತ್ತು ಡಾ॥ ಅಂಬೇಡ್ಕರ್ ಅವರ ಪ್ರತಿಕ್ರಿಯೆಗಳನ್ನು ಆಯಾಕಾಲದ ಸಂದರ್ಭಕ್ಕೆ ಮಾತ್ರ ಸೀಮಿತಗೊಳಿಸಿ ಅವರನ್ನು ಒಟ್ಟಾಗಿ ಅರ್ಥ ಮಾಡಿಕೊಳ್ಳಬೇಕೆ ಹೊರತು, ಅವರ ಸಾಂದರ್ಭಿಕ ಅಭಿಪ್ರಾಯಗಳನ್ನು ಕಟ್ಟು ಗಾಜು ಹಾಕಿಸಿ, ಸ್ಥಿರಗೊಳಿಸಿ, ನೇಣಿಗೇರಿಸಬಾರದು.

"ನಾವು ಗೋರಿ ಅಗೆದು ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರ ಮೂಳೆಗಳನ್ನು ಎಣಿಸುತ್ತಾ, ಪೂಜಿಸುತ್ತಾ, ತರ್ಕಿಸುತ್ತಾ, ಬೇಧ ಹುಡುಕುತ್ತಾ ಮಡಿ ಮಾಡಿ, ಅವರು ಮಡಿಯುವಂತೆ ಮಾಡುತ್ತಿರುವುದನ್ನು ಕೈಬಿಡಬೇಕು."

– **ದೇವನೂರು ಮಹದೇವ** (ದಿ. 30–1–2014ರ ಪ್ರಜಾವಾಣಿ ಪತ್ರಿಕೆಯಲ್ಲಿ)

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	**02.10.1869**
ಕಸ್ತೂರ್‌ಬಾರೊಂದಿಗೆ ವಿವಾಹ	**1881**
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	**1887**
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	**1888**
ಬ್ಯಾರಿಸ್ಟರಾಗಿ ದಾಖಲಾತಿ	**1891**
ಮರಳಿ ಭಾರತಕ್ಕೆ	**1891**
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	**1893**
ಭಾರತ ಸಂದರ್ಶನ	**1896**
	ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	**1901**
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	**1903**
ಫೀನಿಕ್ಸ್ ಆಶ್ರಮ ಸ್ಥಾಪನೆ	**1904**
ಬೋಯರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ	
ಇಂಡಿಯನ್ ಅಂಬುಲೆನ್ಸ್‌ನ ಕೋರ್ ನೇತೃತ್ವ	**1899**
	ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	**1906**
ಇಂಗ್ಲೆಂಡಿಗೆ ಪ್ರಯಾಣ	**1906**
	ಮತ್ತು 1908
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	**1908**
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	**1910**
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	**1913**
ಭಾರತಕ್ಕೆ ಆಗಮನ	**9–1–1915**
ಕೊಚರಬ್ (ಅಹಮದಾಬಾದ್‌ನಲ್ಲಿ) ಆಶ್ರಮ ಸ್ಥಾಪನೆ	**1915**
ಸಬರಮತಿ ಆಶ್ರಮ ಸ್ಥಾಪನೆ	**1917**

ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿಗಾಗಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯುರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಸೇವೆಗಾಗಿ ನಿಧಿ ಸಂಗ್ರಹಣೆ	1933
ಹರಿಜನ್ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ದೆಹಲಿ ಬೀಚ್ ಭವನದಲ್ಲಿ ಕಸ್ತೂರಬಾ ಗಾಂಧಿ ನಿಧನ (ಆಘಾಖಾನ್ ಅರಮನೆ ಸೆರೆ ವಾಸದಲ್ಲಿದ್ದಾಗ)	22–2–1944
ಹಂತಕನ ಗುಂಡೇಟಿಗೆ ಬಲಿ	30–01–1948



ನನ್ನ ಕನಸಿನ ಭಾರತ

"ಇದು ನಮ್ಮ ದೇಶ, ಇದರ ನಿರ್ಮಾಣದಲ್ಲಿ ನಮ್ಮದೂ ಧ್ವನಿಯಿದೆ ಎಂದು ಎಲ್ಲಿ ಕಡು ಬಡವರೂ ಭಾವಿಸಬಲ್ಲರೊ. ಶ್ರೀಮಂತ ಬಡವರೆಂಬ ತಾರತಮ್ಯ ಎಲ್ಲಿ ಇರುವುದಿಲ್ಲವೋ, ಸಂಪೂರ್ಣ ಸೌಹಾರ್ದತೆಯಲ್ಲಿ ಎಲ್ಲ ಸಮುದಾಯದವರೂ ಜೀವಿಸಬಲ್ಲರೋ ಅಂತಹ ಭಾರತದ ನಿರ್ಮಾಣಕ್ಕಾಗಿ ನಾನು ಶ್ರಮಿಸುತ್ತೇನೆ. ಅಲ್ಲಿ ಅಸ್ಪೃಶ್ಯತೆಯ ಶಾಪವಾಗಲೀ, ಮದ್ಯ ಮಾದಕ ದ್ರವ್ಯಗಳ ಶಾಪವಾಗಲಿ ಇರುವುದಿಲ್ಲ. ಅಲ್ಲಿ ಮಹಿಳೆಯು ಪುರುಷರೊಂದಿಗೆ ಹಕ್ಕುಗಳನ್ನು ಸಮಾನವಾಗಿ ಅನುಭವಿಸುತ್ತಿರಬೇಕು. ನಾವು ಜಗತ್ತಿನ ಎಲ್ಲರೊಂದಿಗೆ ಶಾಂತಿಯುತವಾಗಿ ಬಾಳುವಂತಿರಬೇಕು

– ಇದು ನನ್ನ ಕನಸಿನ ಭಾರತ'.

– ಎಂ.ಕೆ. ಗಾಂಧಿ

India of My Dreams

I shall work for an India in which the poorest shall feel that it is their country, in whose making they have an effective voice, an India in which there shall be no high class and low class of people; an India in which all communities shall live in perfect harmony. There can be no room in such an India for the curse of untouchability or the curse of intoxicating drinks and drugs. Women will enjoy the same rights as men. We shall be at peace with all the rest of the world. This is "India of My Dreams."

mkGandhi

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ, ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-05-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927
● ನಿಪ್ಪಾಣಿ	ದಿ. 28-03-1927 ರಿಂದ ದಿ. 30-12-1924 ರವರೆಗೆ

● ಬೆಳಗಾವಿ	ದಿ. 19-04-1027 ರಿಂದ ದಿ. 20-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ	ದಿ. 19-07-1927
● ಮೈಸೂರು	ದಿ. 22-07-1927
● ಬೆಂಗಳೂರು	ದಿ. 12-07-1927 ರಿಂದ ದಿ. 30-07-1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ)	ದಿ. 31-07-1927
● ಕಾನಕನಹಳ್ಳಿ (ಕನಕಪುರ)	
● ಬೆಂಗಳೂರು	ದಿ. 01-08-1927
● ಅರಸೀಕೆರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927

• ಶಿವಮೊಗ್ಗ	ದಿ. 15–08–1927
• ಆಯನೂರು, ಕುಂಸಿ, ಸಾಗರ ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17–08–1927
• ಶಿವಮೊಗ್ಗ	ದಿ. 15–08–1927
• ಭದ್ರಾವತಿ, ತರೀಕೆರೆ	ದಿ. 18–08–1927
• ಬೀರೂರು, ಕಡೂರು	
• ಚಿಕ್ಕಮಗಳೂರು	ದಿ. 19–08–1927
• ಬೇಲೂರು, ಹಳೇಬೀಡು	ದಿ. 20–08–1927
• ಅರಸೀಕೆರೆ	
• ತಿಪಟೂರು	ದಿ. 21–08–1927
• ಬೆಂಗಳೂರು	ದಿ. 22–08–1927
• ಬೆಂಗಳೂರು	ದಿ. 23–08–1927
• ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24–08–1927
• ಬೆಂಗಳೂರು	ದಿ. 25–08–1927 ರಿಂದ ದಿ. 30–08–1927 ರವರೆಗೆ
• ಹಿಂದೂಪುರ, ವಿಧುರಾಶ್ವಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04–01–1934
• ತಗಡೂರು, ಬದನವಾಳು ನಂಜನಗೂಡು, ಮೈಸೂರು	ದಿ. 05–01–1934
• ಮಂಡ್ಯ, ರಾಮನಗರ ಕನಪುರ, ಬಿಡದಿ, ಕೆಂಗೇರಿ	ದಿ. 06–01–1934

● ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾವಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ	ದಿ. 03-03-1934
● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ, ತಿಕೋಟ, ತೊರವಿ ಇಳಕಲ್	ದಿ. 07-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಚಿಂತಾಮಣಿ ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ ಗಾಂಧಿ ಸೇವಾ ಸಂಘ ಸಮ್ಮೇಳನ	16-04-1937 ರಿಂದ 21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	*Truth*
ಅಹಿಂಸೆ	*Ahimsa or Love*
ಅಸ್ತೇಯ (ಕದಿಯದಿರುವುದು)	*Non-Stealing*
ಬ್ರಹ್ಮಚರ್ಯ	*Brahmacharya or Chastity*
ಅಸಂಗ್ರಹ (ಅಪರಿಗ್ರಹ)	*Non-Possession*
ಶರೀರ ಶ್ರಮ	*Physical Labour*
ಅಸ್ವಾದ (ನಾಲಿಗೆ ಚಪಲ ರಹಿತ)	*Control on the Palate*
ಸರ್ವತ್ರ ಭಯವರ್ಜನ (ಅಭಯ)	*Fearlessness*
ಸರ್ವಧರ್ಮ ಸಮಾನತ್ವ	*Equality of Religion*
ಸ್ವದೇಶಿ	*Swadeshi*
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	*Removal of Untouchability*

ಏಳು ಸಾಮಾಜಿಕ ಪಾತಕಗಳು *Seven Social Sins*

ತತ್ವರಹಿತ ರಾಜಕಾರಣ	*Politics without Principles*
ದುಡಿಮೆ ಇಲ್ಲದ ಸಂಪತ್ತು	*Wealth without Work*
ಆತ್ಮಸಾಕ್ಷಿ ಇಲ್ಲದ ಭೋಗ	*Pleasure without Conscience*
ಶಿಲ್ಪವಿಲ್ಲದ ಶಿಕ್ಷಣ	*Education without Character*
ನೀತಿ ಇಲ್ಲದ ವ್ಯಾಪಾರ	*Commerce without Morality*
ಮಾನವೀಯತೆ ಇಲ್ಲದ ವಿಜ್ಞಾನ	*Science without Humanity*
ತ್ಯಾಗ ಇಲ್ಲದ ಪೂಜೆ	*Worship without Sacrifice*

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು

18 CONSTRUCTIVE PROGRAMMES

ಮತೀಯ ಐಕ್ಯತೆ	*Communal Unity*
ಅಸ್ಪೃಶ್ಯತಾ ನಿವಾರಣೆ	*Removal of Untouchability*
ಪಾನನಿರೋಧ	*Prohibition*
ಖಾದಿ	*Khadi*
ಇತರೆ ಗ್ರಾಮೋದ್ಯೋಗ	*Other village industries*
ಗ್ರಾಮ ನೈರ್ಮಲ್ಯ	*Village Sanitation*
ಮೂಲ ಶಿಕ್ಷಣ	*Basic Education*
ವಯಸ್ಕರ ಶಿಕ್ಷಣ	*Adult Education*
ಮಹಿಳಾ ಸಬಲೀಕರಣ	*Women Empowerment*
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	*Hygiene & Health Education*
ಪ್ರಾದೇಶಿಕ ಭಾಷೆ	*Provincial Languages*
ರಾಷ್ಟ್ರಭಾಷೆ	*National Language*
ಆರ್ಥಿಕ ಸಮಾನತೆ	*Economic Equality*
ರೈತರ ಸಬಲೀಕರಣ	*Empowerment of Farmers*
ಕಾರ್ಮಿಕರ ಸಬಲೀಕರಣ	*Empowerment of Labours*
ಆದಿವಾಸಿ ಸಬಲೀಕರಣ	*Tribal Empowerment*
ಕುಷ್ಠರೋಗ ನಿರ್ಮೂಲನೆ	*Cure of Leprocy*
ವಿದ್ಯಾರ್ಥಿ	*Students*

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00
27.	ಪ್ರಾರ್ಥನೆ	25–00
28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00
31.	ಸರ್ವೋದಯ	30–00

32.	ಖಾದಿ ಗ್ರಾಮೋದ್ಯೋಗ	**30–00**
33.	ನನ್ನ ಬಾಲ್ಯದ ನೆನಪುಗಳು	**30–00**
34.	ಗ್ರಾಮರಾಜ್ಯ ಆಡಳಿತ	**5–00**
35.	ನನ್ನ ಕನಸಿನ ಸ್ವರಾಜ್ಯ	**5–00**
36.	ಗಾಂಧೀ ಮತ್ತು ಹಾಸ್ಯ	**20–00**
37.	ನನ್ನ ಆದರ್ಶಗ್ರಾಮ	**5–00**
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	**48–00**
39.	ಸತ್ಯಾಗ್ರಹಿ	**40–00**
40.	ಗ್ರಾಮದಾನ ಗ್ರಾಮ ಸ್ವರಾಜ್ಯ	**25–00**
41.	ಗಾಂಧೀಜಿಯವರ ಪ್ರಾತಃ ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	**5–00**
43.	ಸತ್ಯಾಗ್ರಹ	**5–00**
44.	ಹಿಂದ್ ಸ್ವರಾಜ್	**5–00**
45.	ಆರೋಗ್ಯ	**5–00**
46.	ಮಹಾತ್ಮ ಗಾಂಧಿ ಪ್ರಸ್ತುತತೆ	**10–00**
47.	ಬಹುರೂಪಿ ಗಾಂಧಿ	**10–00**
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	**30–00**
49.	ಕೃತಯುಗಿ ವಿನೋಬಾ ಭಾವೆ	**15–00**
50.	ಮೋಹನ ತರಂಗ	**40–00**
51.	ನಮ್ಮ ಗಾಂಧಿ ತಾತ	**5–00**
52.	ಗೀತಾ ಪ್ರವಚನ	**80–00**
53.	ಜೆ.ಪಿ. ಜೀವನ ಹಾದಿ	**45–00**
54.	ಗಣ್ಯರು ಕಂಡಂತೆ ಗಾಂಧಿ	**20–00**
55.	ಗೀತಾಮಾತೆ	**80–00**
56.	***Temple & Mosque***	***10-00***
57.	***Rastrapita Mahatma Gandhi***	***25-00***
58.	***Swarajya of Dreams***	***500***
59.	***Gandhi My Grand Father***	***5-00***
60.	***Grand Pa Gandhi***	***5-00***
61.	***Relevance of Gandhi***	***20-00***
62.	***Vinoba age of the sage***	***20-00***

ಈ ಭೂಖಂಡದ ಮಾನವ ಬದುಕಿನ ಇತಿಹಾಸದಲ್ಲಿ ಎಷ್ಟೋ ಮಹಾಚೇತನಗಳು ತಮ್ಮ ಸಾಧನೆಗಳ ಮುಖೇನ ಸದಾ ಪ್ರಾತಃಸ್ಮರಣೀಯ ರಾಗಿದ್ದಾರೆ. ಅವರಲ್ಲೆಲ್ಲಾ ತುಂಬಾ ವಿಭಿನ್ನವೂ, ವಿಶೇಷತೆಯದೂ ಆದ ಚೇತನವೆಂದರೆ ಅದು ಗಾಂಧೀಜಿ. ಗೊಬ್ಬರದಿಂದ ಅಧ್ಯಾತ್ಮದವರೆಗಿನ ಜೀವನಕ್ಕೆ ಸಂಬಂಧಿಸಿದ ಅಸಂಖ್ಯ ವಸ್ತು ಸಂಗತಿಗಳ ಬಗ್ಗೆ ಅನನ್ಯತೆಯಲ್ಲಿ ಚಿಂತಿಸಿ ಅವುಗಳ ಬಳಕೆಯ ವಿಧಿ ವಿಧಾನಗಳನ್ನು ಜೀವಪರ ಕಾಳಜಿಯಲ್ಲಿ ವ್ಯಾಖ್ಯಾನಿಸಿದ ಪರಮ ಜ್ಞಾನಿ ಗಾಂಧೀಜಿ. ಅಹಿಂಸೆ, ಸತ್ಯಾಗ್ರಹಗಳ ಶಕ್ತಿಯನ್ನು ಜಗತ್ತಿಗೆ ಬದುಕಿ ತೋರಿದ ಜೀವ.

ಗಾಂಧೀಜಿ ಅವರ ಜೀವನ ಮಾರ್ಗವೆಂದರೆ ಅದೊಂದು ಅಪರೂಪವೂ, ಅನನ್ಯವೂ ಆದ ಲೋಕದರ್ಶನ. ಜಗತ್ತಿನ ಬಹು ದೊಡ್ಡ ಸಾಧಕರೂ, ಚಿಂತಕರೂ, ಸಾಹಿತಿಗಳೂ, ದಾರ್ಶನಿಕರೂ, ರಾಜಕೀಯ ತಜ್ಞರೂ ಹೀಗೆ ಬದುಕಿನ ಸರ್ವರಂಗಗಳಿಗೂ ಸೇರಿದ ಮಹಾಮಹಿಮರು ಇವರ ಜೀವನ ಸಿದ್ಧಾಂತಗಳ ಬಗ್ಗೆ ಮಾತನಾಡಿದ್ದಾರೆ. ಅಲ್ಲಿ ವಿಸ್ಮಯವಿದೆ, ವಿಚಾರಗ್ರಹಿಕೆ ಇದೆ, ಗಾಂಧೀಜಿ ಎಂಬ ದಿವ್ಯ ಚೇತನವನ್ನು ಕಂಡ ಒಳನೋಟವಿದೆ. ಇಂತಹ ಹಲವು ಒಳನೋಟಗಳ ನುಡಿದೀವಿಗೆಗಳನ್ನು ತಮ್ಮ ಭಾವಕರದಲ್ಲಿ ಎತ್ತಿಹಿಡಿದು ಸಾಲಾಗಿ ಜೋಡಿಸಿ ನಮ್ಮೆದುರಿಗೆ ದೀಪಾವಳಿಯ ಸಂಭ್ರಮವನ್ನು ಕಾಣಿಸಿದ್ದಾರೆ ಮಿತ್ರರಾದ ಪ್ರೊ. ಜಿ.ಬಿ. ಶಿವರಾಜು.

ಈ ಭೂಮಿಯ ಬದುಕು ಇರುವವರೆಗೂ ಗಾಂಧೀಜಿ ಅವರ ತತ್ವ ಸಿದ್ಧಾಂತಗಳು ಚರ್ಚೆಗೆ ಗ್ರಾಸವಾಗುವ, ಅನುಸರಣೆಗೆ ಆಹಾರವಾಗುವ ಚಿತ್ತ ಮಾದರಿಗಳು. ನಮ್ಮ ಎಳೆಯ ಪೀಳಿಗೆಗೆ ಗಾಂಧೀಜಿ ಅವರನ್ನು ಪರಿಚಯಿಸುವುದರಿಂದ ಸಹಿಷ್ಣುತೆ, ಸಹಬಾಳ್ವೆಯ ಮಹತ್ವವನ್ನು ಕಲಿಸುವ ಅಗತ್ಯವಿದೆ. ಪ್ರೊ. ಜಿ.ಬಿ. ಶಿವರಾಜು ಅವರ ಕಾಳಜಿ ಈ ಎಳೆಯ ಪೀಳಿಗೆಯ ಭವಿಷ್ಯವನ್ನು ಕುರಿತಾದ ಕಾಳಜಿ. ಗಾಂಧೀ ಮಾರ್ಗದಲ್ಲಿ ಸದ್ದುಗದ್ದಲವಿಲ್ಲದೆ ಸಮಾಜಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ಪ್ರೊ. ಜಿ.ಬಿ. ಶಿವರಾಜು ಅವರ ಈ ಸಂಗ್ರಹಿತ ಪುಸ್ತಕ **'ಅಂಗೈಯಲ್ಲಿ ಗಾಂಧಿ'** ಎಂಬ ದಿವ್ಯ ಚೇತನವನ್ನು ದರ್ಶನ ಮಾಡಿಸುವ ಒಂದು ಸಾರ್ಥಕ ಪ್ರಯತ್ನ.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

₹ 20/-